ಇವರಿಗೆ,
ಕರ್ನಾಟಕ ರಾಜ್ಯ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳವರಿಗೆ
ಸಂಘಸಂಸ್ಥೆಗಳ ನೋಂದಣಿ ಕಾರ್ಯಾಲಯ,
ಬೆಂಗಳೂರು

ಮಾನ್ಯರೇ,

ವಿಷಯ:– ಬೆಂಗಳೂರು **ಭಾರತೀಯ ವೈದ್ಯಕೀಯ ಸಂಘ'"** ಬೆಂಗಳೂರು ಶಾಖೆ **[Indian Medical Association]** ಎಂಬ ಸಂಘವನ್ನು ಕರ್ನಾಟಕ ರಾಜ್ಯಸಂಘಗಳ ನೋಂದಣಿ ಅಧಿನಿಯಮ 1960ರ ಅನುಸಾರ ನೋಂದಣಿ ನವೀಕರಣ ಮಾಡುವ ಕುರಿತು.

ನಾವು ಕರ್ನಾಟಕ ರಾಜ್ಯ ಸಂಘಗಳ ನೋಂದಣಿ ಅಧಿನಿಯಮ 1960 ಮೇರೆಗೆ ನಮ್ಮ ಸಂಘವನ್ನು ನವೀಕರಣ ಸಂಸ್ಥೆಯ ಮೂಲೋದ್ದೇಶಗಳು ಹಾಗೂ ನಿಯಮಾವಳಿಗಳನ್ನು ಸಲ್ಲಿಸಿ ಹಾಗೂ ಅದಕ್ಕೆ ತಗಲುವ ಶುಲ್ಕವನ್ನು ತಮ್ಮ ಕಛೇರಿಯಲ್ಲಿ ಜಮಾ ಮಾಡಿ ನಮ್ಮ ಸಂಘವನ್ನು ನೋಂದಣಿ ನವೀಕರಣ ಮಾಡಿಕೊಡಿ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ದಿನಾಂಕ: 1.10.2021 ರಂದು ಬೆಳಿಗ್ಗೆ 10.30 ಗಂಟೆಗೆ ಸಂಘದ ಕಛೇರಿಯಲ್ಲಿ ನಡೆದ ಸಭೆಯ ನಡವಳಿಕೆಗಳು
ಸಂಘದ ಕಾರ್ಯವ್ಯಾಪ್ತಿ ಬೆಂಗಳೂರು ಶಾಖೆ

ವಿಷಯ: **"ಭಾರತೀಯ ವೈದ್ಯಕೀಯ ಸಂಘ"** ಬೆಂಗಳೂರು ಶಾಖೆ **Indian Medical Association]** ವನ್ನು ಸ್ಥಾಪಿಸುವ ಬಗ್ಗೆ.ಸಂಘವನ್ನು ಕರ್ನಾಟಕ ರಾಜ್ಯ ಸಂಘಗಳ ನೋಂದಣಿ ಅಧಿನಿಯಮದ ಅನುಸಾರ ನೋಂದಣಿ,ಮಾಡುವ ಕುರಿತು
ಸ್ಥಾಪನೆ

ತೀರ್ಮಾನ

ದಿನಾಂಕ 1.10.2021 ರಂದು ಸಂಘದ ಸದಸ್ಯರುಗಳು ಸಭೆ ಸೇರಿ ಆಡಳಿತ ಮಂಡಳಿತ ಸದಸ್ಯರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು ಮತ್ತು **ಭಾರತೀಯ ವೈದ್ಯಕೀಯ ಸಂಘ ಬೆಂಗಳೂರು ಶಾಖೆ [Indian Medical Association, Bangalore]** ಎಂಬ ಸಂಘವನ್ನು ಕರ್ನಾಟಕ ರಾಜ್ಯ ಸಂಘಗಳ ಅಧಿನಿಯಮದನ್ವಯ ನವೀಕರಣ ತತ್ಸಂಬಧವಾಗಿ ಸಿದ್ಧಪಡಿಸಲಾಗಿದ್ದ ಸಂಘದ ಧ್ಯೇಯೋದ್ದೇಶಗಳನ್ನು ಮತ್ತು ನಿಯಮಗಳನ್ನು ಒಮ್ಮತದಿಂದ ಅಂಗೀಕರಿಸಲಾಯಿತು.

ಅಧ್ಯಕ್ಷರು
For The Indian Medical Association
(Bangalore Branch)

President

ಕಾರ್ಯದರ್ಶಿ
Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

I. ಸದಸ್ಯತ್ವ

ಸದಸ್ಯತ್ವದ ನೋಂದಣಿ ವಹಿಯು ಕಾರ್ಯದರ್ಶಿಯಿಂದ ನಿರ್ವಹಿಸಲ್ಪಡುತ್ತದೆ ಮತ್ತು ಕಾಲಕಾಲಕ್ಕೆ ನವೀಕರಿಸಲ್ಪಡುತ್ತದೆ. ಆಹ್ವಾನಿ ತರಾಗಿ ಅಥವಾ ಮನವಿ ಅರ್ಜಿ ಸಲ್ಲಿಸುವ ಮೂಲಕ ಸದಸ್ಯತ್ವ ಪಡೆಯಬೇಕಾಗುತ್ತದೆ. ನೋಂದಾಯಿತ ಕಚೇರಿಯಿಂದ ಸದಸ್ಯತ್ವದ ಅರ್ಜಿನಮೂನೆಗಳನ್ನು ಪಡೆಯಬಹುದಾಗಿದೆ. ಅರ್ಜಿಯು ಸಂಘದ ಒಬ್ಬ ಸದಸ್ಯರಿಂದ ಪ್ರಸ್ತಾಪಿಸಲ್ಪಟ್ಟು ಇತರೇ ಇಬ್ಬರು ಸಂಘದ ಸದಸ್ಯರಿಂದ ಅನುಮೋದಿಸಲ್ಪಡಬೇಕು. ಅರ್ಜಿ ನಮೂನೆಯು ರೂ.1000/– (ಸಾವಿರ ರೂಪಾಯಿಗಳು ಮಾತ್ರ) ಸದಸ್ಯತ್ವ ಶುಲ್ಕವನ್ನು ಹೊಂದಿರಬೇಕು ಮತ್ತು ತದನಂತರ ಕಾಲಕಾಲಕ್ಕೆ ಕಾರ್ಯಕಾರಿ ಸಮಿತಿಯು ಸದಸ್ಯತ್ವದ ಶುಲ್ಕವನ್ನು ನಿಗದಿಪಡಿಸುವುದು. ಅಥವಾ
ಅಜೀವ ಸದಸ್ಯರು:

ಸದಸ್ಯತ್ವದ ವರ್ಗೀಕರಣ

ಅಜೀವ ಸದಸ್ಯರು:
ಸಾಮಾನ್ಯ ಸದಸ್ಯರು
ಪೋಷಕ ಸದಸ್ಯರು:
ಸಾಮಾನ್ಯ ಮಂಡಳಿಯ ಸಭೆಯ ನಿರ್ಣಯದ ಪ್ರಕಾರ ನಿರ್ಧರಿಸಲಾಗುತ್ತದೆ.

III. ಸದಸ್ಯರ ಸವಲತ್ತುಗಳು:

ಎಲ್ಲ ವರ್ಗದ ಸಂಘದ ಸದಸ್ಯತ್ವ ಹೊಂದಿದವರು ಕೆಳಕಂಡ ಸವಲತ್ತುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ

ಅ. ಸಂಘದ ಎಲ್ಲಾ ಚರ್ಚೆ–ಸಮಾಲೋಚನೆಗಳಲ್ಲಿ, ಸಭೆಗಳಲ್ಲಿ ಪಾಲ್ಗೊಳ್ಳಬಹುದು.

ಆ. ಸಂಘದ ಸಮ್ಮೇಳನಗಳಲ್ಲಿ ಉಪಸ್ಥಿತರಿರಬಹುದು

ಇ. ಸಂಘದ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಬಹುದು, ಸ್ಪರ್ಧಿಸಬಹುದು

ಈ. ಸಂಘದ ಯಾವುದೇ ಅಧಿಕೃತ ಚಟುವಟಿಕೆಗಳಲ್ಲಿ ಭಾಗವಹಿಸಬಹುದು.

ಉ. ಸಂಘವು ಆಗಾಗ ಪರಿಚಯಿಸುವಂತಹ ಎಲ್ಲಾ ಸೌಲಭ್ಯಗಳನ್ನು ಹೊಂದಬಹುದು.

IV. ಸದಸ್ಯರ ಕರ್ತವ್ಯಗಳು

ಅ. ಕಾರ್ಯಕಾರಿ ಸಮಿತಿಯ ನಿರ್ಧಾರಗಳಿಗೆ ಬದ್ಧವಾಗಿರಬೇಕು.

ಆ. ವಾರ್ಷಿಕ ರೂ.1000/–(ಸಾವಿರ ರೂಪಾಯಿಗಳು ಮಾತ್ರ) ಶುಲ್ಕವನ್ನು ಸಂದಾಯಿಸಬೇಕು ಮತ್ತು ಕಾರ್ಯಕಾರಿ ಸಮಿತಿಯು ಆಗಾಗ ಪರಿಷ್ಕರಿಸುವ ಶುಲ್ಕವನ್ನು ಮತ್ತು ಅಗತ್ಯವಿದ್ದಾಗ ಹೆಚ್ಚುವರಿ ವೆಚ್ಚಗಳನ್ನು ಭರಿಸಬೇಕು.
ಕರ್ನಾಟಕ ರಾಜ್ಯ ಹಾಗೂ ರಾಷ್ಟ್ರೀಯಸಂಘವು ನಿಗದಿ ಪಡಿಸಿರುವ HFC ಶುಲ್ಕವನ್ನು ಪವತಿಸಬೇಕು:

ಈ. ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು.

V ಸಂಘದ ಸದಸ್ಯತ್ವವನ್ನು ರದ್ದುಪಡಿಸುವಿಕೆ

ಸಾಮಾನ್ಯ ಮಂಡಳಿಯು ಕೆಳಕಂಡ ಯಾವುದಾದರೂ ಆಧಾರದ ಮೇಲೆ ಯಾವುದೇ ಸದಸ್ಯತ್ವವನ್ನು ರದ್ದುಪಡಿಸುವ ಅಥವಾ ಅನರ್ಹಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

ಅ. ನೈತಿಕತೆಗೆ ಧಕ್ಕೆ ತರುವ ಯಾವುದೇ ಅಪರಾಧಕ್ಕಾಗಿ ಶಿಕ್ಷೆಗೊಳಗಾದವರ ಸದಸ್ಯತ್ವ ರದ್ದಾಗುತ್ತದೆ.

ಆ. ಮುಚ್ಚಲ್ಪಟ್ಟ ಖಾಸಗೀ ವೈದ್ಯಕೀಯ ಸಂಸ್ಥೆಯು ಸದಸ್ಯತ್ವದಿಂದ ರದ್ದಾಗುತ್ತದೆ.

ಇ. ಸಂಘಕ್ಕೆ ಯಾವುದೇ ಸದಸ್ಯನು ರಾಜೀನಾಮೆ ಸಲ್ಲಿಸಿದಾಗ ಮತ್ತು ಅದನ್ನು ಕಾರ್ಯಕಾರಿ ಮಂಡಳಿಯು ಅಂಗೀಕರಿಸಿದಾಗ ಮತ್ತು ಸಂಘಕ್ಕೆ ಅವನು ಯಾವುದೇ ಬಾಕಿ ಇಲ್ಲದ ಪಕ್ಷದಲ್ಲಿ ಅವನ ಸದಸ್ಯತ್ವ ರದ್ದಾಗುತ್ತದೆ.

ಈ.ಸಾಮಾನ್ಯ ಮಂಡಳಿಯ ವಿಶೇಷ ಸಭೆಯ ಅನುಮೋದನೆಯಂತೆ ಸಂಘ ವಿರೋಧಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಸಂಘದ ಸದಸ್ಯನನ್ನು ಸಭೆ ನಿಗದಿಪಡಿಸುವ ಅವಧಿಗೆ ಉಚ್ಚಾಟಿಸಬಹುದು ಅಥವಾ ಅಮಾನತ್ತುಗೊಳಿಸಬಹುದು.

ಅಧ್ಯಕ್ಷರು
For The Indian Medical Association
(Bangalore Branch)

Anuradha
President

ಕಾರ್ಯದರ್ಶಿ
IMA Bangalore Branch
IMA House Alur Venkata Rao Road
Chamarajpet Bangalore 560 018

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

ವಿಭಾಗ–3

I. ಸಂಘದ ಆಡಳಿತ

ಸಂಘದ ಚಟುವಟಿಕೆಗಳನ್ನು ನಿರ್ದೇಶಿಸಲು ಮತ್ತು ಮೇಲುಸ್ತುವಾರಿ ಮಾಡಲು ಮತ್ತು ದಿನನಿತ್ಯದ ವ್ಯವಹಾರಗಳನ್ನು ನಿರ್ವಹಿಸಲು ಸದಸ್ಯರು ಮತ್ತು ಅದರ ಕಚೇರಿ ಪದಾಧಿಕಾರಿಗಳನ್ನು ಹೊಂದಿರುವ 'ಕಾರ್ಯಕಾರಿ ಸಮಿತಿ'ಯನ್ನು ಸಾಮಾನ್ಯ ಮಂಡಳಿ ಚುನಾಯಿಸುತ್ತದೆ ಮತ್ತು ಅಧಿಕಾರವನ್ನು ನೀಡುತ್ತದೆ.

ಕಾರ್ಯಕಾರಿ ಸಮಿತಿಯು ಈ ಕೆಳಗಿನಂತಿರುತ್ತದೆ.

1.	ಅಧ್ಯಕ್ಷರು	–	1
2.	ಉಪಾಧ್ಯಕ್ಷರು	–	2
3.	ಕಾರ್ಯದರ್ಶಿ	–	1
4.	ಜಂಟಿ ಕಾರ್ಯದರ್ಶಿ	–	1
5.	ಖಜಾಂಚಿ	–	1
6.	ಸದಸ್ಯರು	–	12

(ಅ) ವೈದ್ಯಕೀಯ ಕ್ಷೇತ್ರದಲ್ಲಿ ಉದ್ಭವಿಸಬಹುದಾದ ಅನಗತ್ಯ ಭಿನ್ನಾಭಿಪ್ರಾಯಗಳನ್ನು ತೊಡೆದುಹಾಕುವುದು ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸದಸ್ಯರ ವ್ಯಕ್ತಿ ನೈಮಣ್ಯತೆಯಲ್ಲಿ ಸಮಾನತೆ ತರುವುದು.

(ಇ) ವೈದ್ಯಕೀಯ ನಿಯತಕಾಲಿಕೆಗಳು, ಪುಸ್ತಕಗಳು, ಕಿರುಹೊತ್ತಿಗೆಗಳ ಚಂದಾದಾರರಾಗುವಿಕೆ, ಅಚ್ಚುಹಾಕಿಸುವಿಕೆ, ಪ್ರಕಟಿಸುವಿಕೆ, ವಿತರಿಸುವಿಕೆ, ವೈದ್ಯಸಾಹಿತ್ಯ ಪ್ರಚುರ ಪಡಿಸುವಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.

(ಈ) ರೋಗಪ್ರತಿಬಂಧಕ ಮತ್ತು ಸಾಮಾಜಿಕ ವೈದ್ಯಕೀಯ ಜ್ಞಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಸಮಾಲೋಚನಾ ಸಭೆ ಜರುಗಿಸುವುದು ಮಾಹಿತಿಯುಕ್ತ ಪ್ರದರ್ಶನ ಏರ್ಪಡಿಸುವುದು. ಗ್ರಂಥಾಲಯ, ಪ್ರಯೋಗಾಲಯ, ವಿದ್ಯಾಲಯ, ಚಿಕಿತ್ಸಾಲಯ, ದವಾಖಾನೆ, ಆಸ್ಪತ್ರೆ ಮುಂತಾದ ಸಾರ್ವಜನಿಕ ಸಂಘ–ಸಂಸ್ಥೆಗಳಲ್ಲಿ ಜನಸಾಮಾನ್ಯರನ್ನು ಉತ್ತೇಜಿಸಲು–ಪ್ರೇರೇಪಿಸಲು ಉಪಯುಕ್ತ ಕಾರ್ಯ ಕ್ರಮಗಳನ್ನು ಆಯೋಜಿಸುವುದು.

(ಉ) ಸಂಘಕ್ಕಾಗಿ ನಿವೇಶನ ಅಥವಾ ಕಟ್ಟಡವನ್ನು ವಶಪಡಿಸಿಕೊಳ್ಳುವುದು, ಖರೀದಿಸುವುದು, ಗುತ್ತಿಗೆ ಪಡೆಯುವುದು, ಸಂಘದ ಭೂಮಿ ನಿವೇಶನದಲ್ಲಿ ಕಟ್ಟಡ ನಿರ್ಮಾಣ–ನವೀಕರಣ ಅಥವಾ ಮರುನಿರ್ಮಾಣ, ಸೂಕ್ತ ನಿರ್ವಹಣೆ, ತೀರಾ ಅವಶ್ಯಕವೆನಿಸಿದಲ್ಲಿ ಸಂಸ್ಥೆಯ ಹಿತದೃಷ್ಟಿಯಿಂದ ಅವುಗಳ ವಿಕ್ರಯ, ಒತ್ತೆಯಿಡುವುದು, ಗುತ್ತಿಗೆ ನೀಡುವುದು ಅಥವಾ ಇತರೇ ಮಾರ್ಗದಲ್ಲಿ ಹಸ್ತಾಂತರಿಸುವುದು.

(ಊ) ಸಂಘದ ಸ್ವತ್ತು, ಆಸ್ತಿಪಾಸ್ತಿ, ಹಕ್ಕುಭಾದ್ಯತೆ, ಭದ್ರತೆಯ ಮೇಲೆ ಸಾಲ ಪಡೆಯುವುದು, ತನ್ಮೂಲಕ ಯಾವುದೇ ಉದ್ದೇಶಕ್ಕಾಗಿ ಭೂಮಿ, ನಿವೇಶನ, ಕಟ್ಟಡ ನಿರ್ಮಾಣ, ಖರೀದಿ, ನವೀಕರಣ, ಮರುನಿರ್ಮಾಣ ಮಾಡಬಹುದು.

(ಋ) ಜಂಟಿಯೋಜನೆ, ಕಾರ್ಯಕ್ರಮ ಒಪ್ಪಂದಗಳಿಗಾಗಿ ಇತರೇ ಸಮಾನ ಧ್ಯೇಯೊ ಉದ್ದೇಶಗಳುಳ್ಳ ಸಂಘಗಳೊಂದಿಗೆ ಸಹಭಾಗಿತ್ವ ಹೊಂದುವುದು.

ಅಧ್ಯಕ್ಷರು
For The Indian Medical Association
(Bangalore Branch)

President

ಕಾರ್ಯದರ್ಶಿ

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

ಖಖ)ರೋಗಿಗಳ ಬಾಧೆಗಳನ್ನು ನಿವಾರಿಸುವ ಪ್ರಮುಖ ಉದ್ದೇಶದಿಂದ ಆಧುನಿಕ ವೈದ್ಯಪದ್ಧತಿಯನ್ನು ನೈತಿಕತೆಯಿಂದ ಅನುಷ್ಠಾನ ಗೊಳಿಸುವುದು

(ಎ) ಆಧುನಿಕ ವೈದ್ಯ ಪದ್ಧತಿಗನುಗುಣವಾಗಿ ಸ್ಥಾಪಿತವಾದ ಶುಶ್ರೂಷಾ ನಿಲಯ, ಆಸ್ಪತ್ರೆ, ತಪಾಸಣಾ ಕೇಂದ್ರ ಮತ್ತಿನ್ನಿತರ ಖಾಸಗಿ ವೈದ್ಯಕೀಯ ಕೇಂದ್ರಗಳ ಒಟ್ಟಾರೆ ಅಭ್ಯುದಯವನ್ನು ನೋಡಿಕೊಳ್ಳುವುದು.

(ಏ) ಇಂತದೇ ಉದ್ದೇಶಗಳ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನೋಂದಾಯಿತ ಸಂಘಟನೆಗಳೊಡನೆ ಅವಶ್ಯಕತೆಗೆ ಅನುಗುಣವಾಗಿ ಸಂಯೋಜನೆ ಹೊಂದುವುದು.

(ಐ) ಸಂಘದ ಸದಸ್ಯರಿಗಾಗಿ ಆಸ್ಪತ್ರೆ ಆಡಳಿತದ ನವೀಕರಣ ಮತ್ತು ಉನ್ನತೀಕರಣದ ಬಗ್ಗೆ ಮಾಹಿತಿ ನೀಡುವುದು, ಅರೆವೈದ್ಯಕೀಯ ಸಿಬ್ಬಂದಿಗಳಿಗೆ ರೋಗಿಗಳ ಉತ್ತಮ ಪೋಷಣೆಗೆ ಉತ್ತೇಜಿಸುವುದು ಹಾಗೂ ಮತ್ತು ಅವರಿಗೆ ಉಪಯುಕ್ತ ಉಪನ್ಯಾಸಗಳನ್ನು ಮತ್ತು ಕಾರ್ಯಗಾರಗಳನ್ನು ಸಂಘಟಿಸುವುದು.

(ಒ) ಖಾಸಗಿ ಶುಶ್ರೂಷ ಗೃಹಗಳು, ಆಸ್ಪತ್ರೆಗಳು ಮತ್ತಿನ್ನಿತರ ಖಾಸಗಿ ವೃತ್ತಿಗೃಹಗಳಲ್ಲಿ ಸಮರ್ಥ ಸಾಮಾನ್ಯ ಮಾನದಂಡಗಳನ್ನು ನಿರ್ವಹಿಸುವುದು ಮತ್ತು ವಿವಿಧ ವೈದ್ಯಕೀಯ ವಿಭಾಗಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸುವುದು.

ಓ) ರಾಜ್ಯ ಮತ್ತು ಕೇಂದ್ರ ಸರ್ಕಾರ ಮತ್ತು ವಿಶ್ವ ಆರೋಗ್ಯ ಸಂಸ್ಥೆಗಳ ಆರೋಗ್ಯ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು.

(ಔ) ಸಾಮಾನ್ಯವಾಗಿ ಸಂಘದ ಗುರಿ ಮತ್ತು ಉದ್ದೇಶಗಳಿಗೆ ಅಗತ್ಯ ಮತ್ತು ಅನುಕೂಲಕರವೆಂದು ಕಂಡು ಬಂದ ಇತರೇ ಯಾವುದೇ ಚಟುವಟಿಕೆಗಳನ್ನು ಮಾಡುವುದು.

4. ಸಂಘದ ಕಾರ್ಯವ್ಯಾಪ್ತಿ

ಸಂಘದ ಕಾರ್ಯವ್ಯಾಪ್ತಿ ಬೆಂಗಳೂರು ನಗರ ಜಿಲ್ಲೆಯಾದ್ಯಂತ ವಿಸ್ತರಿಸಲ್ಪಟ್ಟಿರುತ್ತದೆ.

5. ಫಲಾನುಭವಿಗಳು

ಈ ಸಂಘದ ಫಲಾನುಭವಿಗಳು ಶ್ರೀಸಾಮಾನ್ಯ ಜನರಾಗಿರುತ್ತಾರೆ. ಜಾತಿ, ಜನಾಂಗ, ಧರ್ಮ ಅಥವಾ ಭಾಷಾ ಭೇದವಿಲ್ಲದೇ ಎಲ್ಲ ಸಾರ್ವಜನಿಕರೂ ಮುಕ್ತವಾಗಿ ಈ ಸಂಘದ ಪ್ರಯೋಜನೆ ಪಡೆಯಲು ಅರ್ಹರಾಗಿರುವರೆಂದು ಈ ಮೂಲಕ ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

6. ಸಂಘದ ಸದಸ್ಯತ್ವ

ಅ) Karnataka Medical Councilನಲ್ಲಿ ನೋಂದಾಣಿ ಹೊಂದಿರುವ MBBS ವೈದ್ಯರಾಗಿರುವವರು ಮಾತ್ರ ಸದಸ್ಯತ್ವ ಪಡೆಯಲು ಅರ್ಹರಾಗಿರುತ್ತಾರೆ.

ಅಧಿಕಾರತಃ ಸದಸ್ಯರು
ನಿಕಟ ಪೂರ್ವ ಅಧ್ಯಕ್ಷರು
ನಿಕಟ ಪೂರ್ವ ಕಾರ್ಯದರ್ಶಿ
ವಿಶೇಷ ಆಹ್ವಾನಿತರು
IMA Bangalore Branchನ ಎಲ್ಲಾ ಪೂರ್ವ ಅಧ್ಯಕ್ಷರು

ಅಧ್ಯಕ್ಷರು
For The Indian Medical Association
(Bangalore Branch)
President

ಕಾರ್ಯದರ್ಶಿ
Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

II. ಕಾರ್ಯಕಾರಿ ಸಮಿತಿಯ ಅಧಿಕಾರಗಳು

ಅ. ಸಾಮಾನ್ಯ ಮಂಡಳಿಯಿಂದ ಕಾಲಕಾಲಕ್ಕೆ ನಿಗದಿಪಡಿಸುವಂತೆ ಸಂಘದ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ಅಧಿಕಾರವನ್ನು ಕಾರ್ಯಕಾರಿ ಸಮಿತಿ ಹೊಂದಿರುತ್ತದೆ.

ಆ. ಕರ್ನಾಟಕ, ಭಾರತ ಮತ್ತು ವಿದೇಶಗಳ ಸಮಾನ ಉದ್ದೇಶ ಹೊಂದಿರುವ ಸಂಘಗಳ ನಡುವೆ ಸೌಹಾರ್ದ ಸಂಬಂಧ ಹೊಂದುವುದು.

ಇ. ಖಾಸಗಿ ವೈದ್ಯಕೀಯ ಸಂಸ್ಥೆಗಳ ಸಮಸ್ಯೆಗಳನ್ನು ಚರ್ಚಿಸಿ ನಿವಾರಣಾತ್ಮಕ ಕ್ರಮ ಕೈಗೊಳ್ಳುವ ಬಗ್ಗೆ ನಿರ್ಧರಿಸಲು ಸಾಮಾನ್ಯ ಮಂಡಳಿಗೆ ಶಿಫಾರಸ್ಸು ಮಾಡುವುದು.

ಈ. ಸಂಘದ ಪರವಾಗಿ ಚಿರ ಮತ್ತು ಚರ ದೇಣಿಗೆ ಮತ್ತು ಕಾಣಿಕೆಗಳನ್ನು ಸ್ವೀಕರಿಸುವುದು.

ಉ. ನಿರ್ದಿಷ್ಟ ಉದ್ದೇಶಗಳಿಗಾಗಿ ಅಗತ್ಯವಿದ್ದಾಗ ಉಪ ಸಮಿತಿಗಳನ್ನು ನೇಮಕ ಮಾಡಿಕೊಳ್ಳಬಹುದು. ಈ ಉಪಸಮಿತಿಗಳ ಅವಧಿಯು ಕಾರ್ಯಕಾರಿ ಸಮಿತಿಯಅವಧಿಯೊಂದಿಗೆ ಅಥವಾ ಉಪಸಮಿತಿಯ ಉದ್ದೇಶ ಈಡೇರಿದಾಗ ಕೊನೆಗೊಳ್ಳುತ್ತದೆ ಉಪಸಮಿತಿಯ ವರದಿಯು ಕಾರ್ಯಕಾರಿ ಸಮಿತಿಯ ಚಟುವಟಿಕೆಗಳಿಗೆ ಶಿಫಾರಸ್ಸುದಾಯಕವಾಗಬಹುದು.

ಊ. ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು.

ಋ. ಕಾರ್ಯಕಾರಿ ಸಮಿತಿಯು ಸಂಘದ ಖರ್ಚು ವೆಚ್ಚದ ಮೇಲ್ವಿಚಾರಣೆ ಮಾಡುವುದು ಮತ್ತು ಕಾಲಕಾಲಕ್ಕೆ ಆಸ್ತಿಗಳ ವಿವರ ಗಳನ್ನು ದಾಖಲಿಸುವುದು.

III. ಕಾರ್ಯಕಾರಿ ಸಮಿತಿಯ ಸಭೆಗಳು:

ಅ. ಕಾರ್ಯಕಾರಿ ಸಮಿತಿಯು ತಿಂಗಳಿಗೊಮ್ಮೆ ಮೋದಲನೆ ಗುರುವಾರ ಅಥವಾ ಅಗತ್ಯವಿದ್ದಾಗ ಸಭೆ ಸೇರಬಹುದು,

ಆ. ಕಾರ್ಯಕಾರಿ ಸಮಿತಿಯ ಸಭೆಗೆ ಒಟ್ಟು ಕಾರ್ಯಕಾರಿ ಸದಸ್ಯರ 1/3ರಷ್ಟು ಸದಸ್ಯರ ಕನಿಷ್ಠ ಉಪಸ್ಥಿತಿ (ಕೋರಂ) ಅತ್ಯಗತ್ಯ. ಕೋರಂ ಕೊರತೆಯ ಸಂದರ್ಭದಲ್ಲಿ ಸಭೆಯನ್ನು ಅರ್ಧ ಗಂಟೆ ಮುಂದೂಡಿ ಅದೇ ಸ್ಥಳದಲ್ಲಿ ಪುನಃ ಸಭೆ ಸೇರಿಸಿ ಸಭೆಯ ವಿಷಯಾಂಶಗಳನ್ನು ವ್ಯವಹರಿಸಬಹುದು. ಮುಂದೂಡಿದ ಸಮಯದ ಸಭೆಗೆ ಕನಿಷ್ಠ ಸದಸ್ಯರ ಉಪಸ್ಥಿತಿಯ ಅಗತ್ಯವಿರುವುದಿಲ್ಲ.

ಇ. ಕಾರ್ಯಕಾರಿ ಸಮಿತಿ ಸಭೆಯ ಸೂಚನೆಯನ್ನು ಕನಿಷ್ಠ 7 ದಿನ ಮುಂಚಿತವಾಗಿ ಕಳಿಸಬೇಕು.

IV. ಕಾರ್ಯಕಾರಿ ಸಮಿತಿ ಸದಸ್ಯರ ಅನರ್ಹಗೊಳಿಸುವಿಕೆ :

ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಸದಸ್ಯರು ಮುದ್ದಾಂ ಹಾಜರಿರತಕ್ಕದ್ದು. ಒಂದುವೇಳೆ ಯಾವುದೇ ಸೂಕ್ತ ಕಾರಣವಿಲ್ಲದೇ ಸತತವಾಗಿ ಮೂರು ಸಭೆಗಳಿಗೆ ಗೈರುಹಾಜರಾಗುವ ಸದಸ್ಯರು ತಮ್ಮ ಕಾರ್ಯಕಾರಿಣಿ ಮಂಡಳಿಯ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ.

V. ಕಾರ್ಯಕಾರಿ ಸಮಿತಿ ಸಭೆಯ ನಡವಳಿಕೆಗಳ ಸಿಂಧುತ್ವ :

ಕಾರ್ಯಕಾರಿ ಸಮಿತಿ ಸಭೆಯ ನಡಾವಳಿಕೆಗಳು ಸರ್ವಸಾಮಾನ್ಯವಾಗಿ ಗೌರವಿಸಲ್ಪಡುತ್ತವೆ. ಅದಾಗ್ಯೂ ಸಾಮಾನ್ಯ ಮಂಡಳಿಯು ಇವುಗಳನ್ನು ಮಾರ್ಪಡಿಸಬಹುದು, ಇವುಗಳಿಗೆ ಸೇರಿಸಬಹುದು, ಇವುಗಳನ್ನು ಬದಲಾವಣೆ ಮಾಡಬಹುದು.

ವಿಭಾಗ–4

ಕಾರ್ಯಕಾರಿ ಸಮಿತಿ ಕಚೇರಿ ಪದಾಧಿಕಾರಿಗಳ ಕರ್ತವ್ಯಗಳು

ಅಧ್ಯಕ್ಷರು:

ಅ. ಕಾರ್ಯಕಾರಿ ಸಮಿತಿ, ಸಾಮಾನ್ಯ ಮಂಡಳಿ, ವಿಶೇಷ ಸಾಮಾನ್ಯ ಮಂಡಳಿ ಸಭೆಗಳು ಮತ್ತು ಸಂಘದಿಂದ ವ್ಯವಸ್ಥೆಗೊಳಿಸಲ್ಪಡುವ ಸಾರ್ವಜನಿಕ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸುವುದು.

ಆ. ಸಂಘದ ಎಲ್ಲಾ ಉಪಸಮಿತಿಗಳಿಗೆ ಅಧಿಕಾರತಃ ಸದಸ್ಯನಾಗಿರುವುದು.

ಇ. ಮುಂದಿನ ಅವಧಿಯ ಕಾರ್ಯಕಾರಿ ಸಮಿತಿಗೆ ಕಾರ್ಯದರ್ಶಿ ಸಮೇತ ಅಧಿಕಾರತಃ ಸದಸ್ಯನಾಗಿರುವುದು.

ಅಧ್ಯಕ್ಷರು
For The Indian Medical Association
(Bangalore Branch)

President

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

ಕಾರ್ಯದರ್ಶಿ
Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

ಈ. ಸಂಘದ ಅಥವಾ ಯಾವುದೇ ತನ್ನ ಸದಸ್ಯರ ಹಿತಾಸಕ್ತಿಗೆ ಧಕ್ಕೆಯಾದಾಗ ಅಥವಾ ಸಂಘದ ಸದಸ್ಯರು ಬಾಧಿತರಾದಾಗ (ವಿಕ್ಟಿಮೈಜ್ ಆದಾಗ) ಮತ್ತು ಯಾವುದೇ ತುರ್ತು ಸಾಮಾಜಿಕ ಸಮಸ್ಯೆಗಳ ಸಂದರ್ಭದಲ್ಲಿ ಆ ಬಗ್ಗೆ ಚರ್ಚಿಸಲು ಮತ್ತು ತೆಗೆದುಕೊಳ್ಳಬೇಕಾದ ಅಗತ್ಯ ಕ್ರಮದ ಬಗ್ಗೆ ತೀರ್ಮಾನಿಸಲು ಕಾರ್ಯಕಾರಿ ಸಮಿತಿಯ ತುರ್ತು ಸಭೆ ಅಥವಾ ಅಸಾಧಾರಣ ಸಾಮಾನ್ಯ ಮಂಡಳಿ ಸಭೆ ಕರೆಯುವ ಅಧಿಕಾರ ಅಧ್ಯಕ್ಷರಿಗಿರುತ್ತದೆ.

ಉ. ಯಾವುದೇ ಮತದಾನ ಸಂದರ್ಭದಲ್ಲಿ ಸಮಮತದ ಬಿಕ್ಕಟ್ಟು ಸಂಭವಿಸಿದಾಗ ಅಧ್ಯಕ್ಷರು ತಮ್ಮ ನಿರ್ಣಾಯಕ ಮತ ಚಲಾಯಿಸಬಹುದು.

II. ಉಪಾಧ್ಯಕ್ಷರು:

ಅ. ಸರ್ವಸಾಮಾನ್ಯವಾಗಿ ಅಧ್ಯಕ್ಷರಿಗೆ ಸಹಾಯ ಮಾಡುವುದು.

ಆ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಸಂಘದ ಎಲ್ಲ ಸಭೆಗಳ ಅಧ್ಯಕ್ಷತೆ ವಹಿಸಿಕೊಳ್ಳುವುದು ಮತ್ತು ಅಧ್ಯಕ್ಷರ ಎಲ್ಲ ಅಧಿಕಾರಗಳನ್ನು ನಿರ್ವಹಿಸುವುದು.

ಇ. ಸಂಘದ ಎಲ್ಲ ಅಧಿಕೃತ ವಿಷಯಗಳಲ್ಲಿ ಸಹಭಾಗಿಯಾಗಿರುವುದು.

ಈ. ಸಂಘದ ಅಧಿಕೃತ ಸಭೆಗಳ ಅಧ್ಯಕ್ಷತೆ ವಹಿಸಿಕೊಳ್ಳಲು ಉಪಾಧ್ಯಕ್ಷರು ಅಸಮರ್ಥತೆಯನ್ನು ವ್ಯಕ್ತಪಡಿಸಿದರೆ ಕಾರ್ಯಕಾರಿ ಸಮಿತಿಯ ಯಾವುದೇ ಸದಸ್ಯನನ್ನು ಅಧಿಕೃತ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಲು ನೇಮಿಸಬಹುದು.

III. ಕಾರ್ಯದರ್ಶಿ:

ಅ. ಸಂಘದ ದಿನನಿತ್ಯದ ಆಡಳಿತ ನಿರ್ವಹಣೆ ಕಾರ್ಯದರ್ಶಿಯ ಜವಾಬ್ದಾರಿಯಾಗಿರುತ್ತದೆ.

ಆ. ಸಂಘದ ಪರವಾಗಿ ಎಲ್ಲ ಪತ್ರವ್ಯವಹಾರಗಳನ್ನು ನಿಭಾಯಿಸುವುದು ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯಗಳನ್ನು ಜಾರಿಗೊಳಿಸುವುದು.

ಇ. ನವೀಕೃತ ದಾಖಲೆಗಳು ಅಥವಾ ದಾಖಲಾತಿವಹಿಗಳ ನಿರ್ವಹಣೆ ಮತ್ತು ಸಂಘದ ಎಲ್ಲಾ ದಾಖಲೆಗಳ ರಕ್ಷಣೆ ಕಾರ್ಯದರ್ಶಿಯ ಜವಾಬ್ದಾರಿಯಾಗಿರುತ್ತದೆ.

ಈ. ಅಧ್ಯಕ್ಷರೊಡನೆ ಸಮಾಲೋಚಿಸಿ 7ದಿನಗಳ ಮುಂಗಡ ಸಭಾಸೂಚನೆ ಕಳಿಸಿ ಕಾರ್ಯಕಾರಿ ಸಮಿತಿಯ ಸಭೆ ಸೇರಿಸುವುದು, 21 ದಿನಗಳ ಮುಂಗಡ ಸಭಾಸೂಚನೆ ಕಳಿಸಿ ಸಾಮಾನ್ಯ ಮಂಡಳಿಯ ಸಭೆ ಸೇರಿಸುವುದು ಕಾರ್ಯದರ್ಶಿಯ ಕರ್ತವ್ಯವಾಗಿರುತ್ತದೆ. ಅಧ್ಯಕ್ಷರ ಸೂಚನೆಯ ಮೇರೆಗೆ ಅಸಾಧಾರಣ ಕಾರ್ಯಕಾರಿ ಸಮಿತಿಯ ಸಭೆ, ಅಸಾಧಾರಣ ಸಾಮಾನ್ಯ ಮಂಡಳಿಯ ಸಭೆ ಮತ್ತು ವಿಶೇಷ ಸಾಮಾನ್ಯ ಮಂಡಳಿಯ ಸಭೆ ಸೇರಿಸಬಹುದು.

ಉ. ಸಂಘದ ಎಲ್ಲಾ ಸಭೆಗಳ ನಿರ್ಣಯ(ಮಿನಿಟ್)ಗಳನ್ನು ದಾಖಲಿಸುವುದು ಮತ್ತು ದಾಖಲಾತಿಗಳನ್ನು ಸುರಕ್ಷಿತವಾಗಿಡುವುದು ಕಾರ್ಯದರ್ಶಿಯ ಜವಾಬ್ದಾರಿಯಾಗಿರುತ್ತದೆ.

ಊ. ಸಂಘದ ಚಟುವಟಿಕೆಗಳ ವಾರ್ಷಿಕ ವರದಿ ತಯಾರಿಸಿ ಕಾರ್ಯಕಾರಿ ಸಮಿತಿ ಮತ್ತು ಸಾಮಾನ್ಯಮಂಡಳಿಯಸಭೆಯಲ್ಲಿ ಸಲ್ಲಿಸುವುದು.

ಋ.ಸಂಘದ ಕಲ್ಯಾಣಕ್ಕೋಸ್ಕರ ಮಾಡಿದ ಅಧ್ಯಕ್ಷರ ಎಲ್ಲ ಕ್ರಮಗಳನ್ನು ಬೆಂಬಲಿಸುವುದು.

ಎ. ಕಾಲಕಾಲಕ್ಕೆ ಅಧ್ಯಕ್ಷರಿಂದ ಮತ್ತು ಕಾರ್ಯಕಾರಿ ಸಮಿತಿಯಿಂದ ಒಪ್ಪಿಸಲಾದ ಹೆಚ್ಚುವರಿ ಕರ್ತವ್ಯಗಳನ್ನು ನಿಭಾಯಿಸುವುದು.

ಏ. ಸೂಚಿತ ಸಂದರ್ಭಗಳಲ್ಲಿ ಹೊರತುಪಡಿಸಿ ಸಂಘದ ಪರ ಅಥವಾ ಅದರ ವಿರುದ್ಧ ದಾಖಲಾದ ತಕರಾರು ಪ್ರಕರಣಗಳ ಸಂದರ್ಭಗಳಲ್ಲಿ ಕಾರ್ಯದರ್ಶಿಯು ಸಂಘವನ್ನು ಪ್ರತಿನಿಧಿಸುವುದು.

IV. ಖಜಾಂಚಿ:

ಅ. ಸಂಘದ ಲೆಕ್ಕಪತ್ರಗಳನ್ನು ನಿರ್ವಹಿಸುವುದು ಖಜಾಂಚಿಯ ಜವಾಬ್ದಾರಿ.

ಆ.ಬ್ಯಾಂಕ್ ಲೆಕ್ಕಖಾತೆಯ ವಹಿವಾಟುಗಳನ್ನು ಕಾರ್ಯದರ್ಶಿಅಥವಾ ಅಧ್ಯಕ್ಷರ ಜೊತೆ ಜಂಟಿಯಾಗಿ ವ್ಯವಹರಿಸುವುದು.

ಇ. ಅಧ್ಯಕ್ಷರ ಕಟ್ಟುನಿಟ್ಟಾದ ಮೇಲ್ವಿಚಾರಣೆಯಲ್ಲಿ ಸಂಘದ ಹಣಕಾಸು ವಹಿವಾಟುಗಳನ್ನು ವ್ಯವಹರಿಸುವುದು.

ಈ. ರೂ.5000/–ಕ್ಕಿಂತ ಹೆಚ್ಚು ನಗದು ಹಣವನ್ನು ಇಟ್ಟುಕೊಳ್ಳತಕ್ಕದ್ದಲ್ಲ. ರೂ.15000/–ಕ್ಕಿಂತಲೂ ಹೆಚ್ಚಿನ ಮೊತ್ತವನ್ನೊಳಗೊಂಡ ನಗದು ವಹಿವಾಟುಗಳನ್ನು ನಡೆಸತಕ್ಕದ್ದಲ್ಲ.

ಉ.ಹಣಕಾಸು ವ್ಯವಹಾರಗಳ ರಶೀದಿ/ಪಾವತಿ ವೋಚರುಗಳನ್ನು ವ್ಯವಸ್ಥಿತವಾಗಿರಿಸಿಕೊಳ್ಳುವುದು ಖಜಾಂಚಿಯ ಜವಾಬ್ದಾರಿಯಾಗಿರುತ್ತದೆ.

ಋ. ಹಣಕಾಸು ವರ್ಷದ ಕೊನೆಯಲ್ಲಿ ಶಿಲ್ಕುಪಟ್ಟಿ (ಬ್ಯಾಲೆನ್ಸ್ ಶೀಟ್)ತಯಾರಿಸಲು ಚಾರ್ಟರ್ಡ್ ಅಕೌಂಟೆಂಟ್ ರವರೊಂದಿಗೆ ಸಹಕರಿಸುವುದು, ಯಾವುದೇ ರೀತಿಯ ಸ್ವೀಕೃತಿ ಹಣಕ್ಕೆ ರಸೀದಿಗಳನ್ನು ಕಳುಹಿಸುವುದು,

ಅಧ್ಯಕ್ಷರು

For The Indian Medical Association
(Bangalore Branch)

President

ಕಾರ್ಯದರ್ಶಿ
Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

- ಕಾಲಕಾಲಕ್ಕೆ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯು ಒಪ್ಪಿಸುವ ಇತರೇ ಕರ್ತವ್ಯಗಳನ್ನು ನಿಭಾಯಿಸುವುದು.

ವಿಭಾಗ–5

I. ಕಚೇರಿ ಪದಾಧಿಕಾರಿಗಳ ಅವಧಿ

ಅ. ಕಾರ್ಯಕಾರಿ ಸಮಿತಿಯ ಕಚೇರಿ ಪದಾಧಿಕಾರಿಗಳ ಹಾಗೂ ಸದಸ್ಯರುಗಳ ಅವಧಿ ಒಂದು ವರ್ಷಗಳನ್ನು ಮೀರುವಂತಿಲ್ಲ. ಅವನು/ಅವಳು ಈ ಕೆಳಗೆ ನಮೂದಿಸಿದಂತೆ ಮುಂದಿನ ಅವಧಿಗೆ ಚುನಾವಣೆ ಎದುರಿಸಬಹುದು.

ಆ. ಉಪಾಧ್ಯಕ್ಷರು/ಜಂಟಿಕಾರ್ಯದರ್ಶಿ/ಖಜಾಂಚಿ ಯಾವುದೇ ಹುದ್ದೆಗಳು ಖಾಲಿ ಬಿದ್ದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರ ಪೈಕಿ ಒಬ್ಬ ಸದಸ್ಯರನ್ನು ಮುಂದಿನ ಬಾಕಿ ವರ್ಷದ ಅವಧಿಗೆ ಕಾರ್ಯಕಾರಿಣಿ ಸಮಿತಿ ಆಯ್ಕೆ ಮಾಡಬಹುದು ಅಥವಾ ನಾಮನಿರ್ದೇಶನ ಮಾಡಬಹುದು.

ಇ. ಅಧ್ಯಕ್ಷರು ರಾಜೀನಾಮೆ ಸಲ್ಲಿಸಿದ ಸಂದರ್ಭದಲ್ಲಿ ಉಪಾಧ್ಯಕ್ಷರನ್ನು ಅಧ್ಯಕ್ಷ ಪದವಿಗೇರಿಸಬಹುದು. ಒಂದು ವೇಳೆ ಉಪಾಧ್ಯಕ್ಷರು ನಿರಾಕರಿಸಿದರೆ ಅಥವಾ ಅಧ್ಯಕ್ಷ ಪದವಿ ವಹಿಸಿಕೊಳ್ಳಲು ಅಸಮರ್ಥವಿದ್ದಲ್ಲಿ, ಕಾರ್ಯಕಾರಿ ಸಮಿತಿಯ ಯಾವುದೇ ಸದಸ್ಯರನ್ನು ಕಾರ್ಯಕಾರಿ ಸಮಿತಿಯು ಅಧ್ಯಕ್ಷರನ್ನಾಗಿ ಆರಿಸಬಹುದು ಅಥವಾ ನಾಮನಿರ್ದೇಶನ ಮಾಡಬಹುದು.

II. ಚುನಾವಣೆಗಳು:

1. ಅಧ್ಯಕ್ಷರು ಕಾರ್ಯಕಾರಿ ಸಮಿತಿಯೊಂದಿಗೆ ಸಮಾಲೋಚಿಸಿ ನಿರ್ವಾಚನಾಧಿಕಾರಿಯನ್ನು ನೇಮಿಸಬಹುದು.
2. ನಿರ್ವಾಚನಾಧಿಕಾರಿಯು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಜಂಟಿಕಾರ್ಯದರ್ಶಿ, ಖಜಾಂಚಿ ಮತ್ತು 12 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರ ಹುದ್ದೆಗಳಿಗೆ ಚುನಾವಣೆ ಅಧಿಸೂಚನೆಯನ್ನು ಪ್ರಕಟಿಸಬಹುದು. ಉದ್ದೇಶಿತ ಸಾಮಾನ್ಯ ಮಂಡಳಿಯ ಸಭೆಗೆ ಎಂಟು ವಾರಗಳ ಮೊದಲು, ಸಂಘದ ಹಾಜರಿ ವಹಿಯಲ್ಲಿ ನಮೂದಿಸಲ್ಪಟ್ಟಿರುವ ಎಲ್ಲಾ ಸದಸ್ಯರುಗಳಿಗೆ ಸೂಚನಾಪತ್ರ ಕಳಿಸತಕ್ಕದ್ದು.
3. ಸದರಿ ಸೂಚನಾಪತ್ರವು ಕಾರ್ಯಕಾರಿ ಮಂಡಳಿಯಿಂದ ಅನುಮೋದಿತ ನಾಮಪತ್ರ ನಮೂನೆಯನ್ನು ಮತ್ತು ಚುನಾವಣಾ ಪ್ರಕ್ರಿಯೆಯ ತಾರೀಖುಗಳನ್ನು ಒಳಗೊಂಡಿರತಕ್ಕದ್ದು.
4. ಕಾರ್ಯಕಾರಿ ಸಮಿತಿಗೆ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಜಂಟಿಕಾರ್ಯದರ್ಶಿ, ಖಜಾಂಚಿ ಮತ್ತು 12 ಸದಸ್ಯರು ಹುದ್ದೆಯ ಅಭ್ಯರ್ಥಿಗಳು ಪೂರ್ತಿ ಭರ್ತಿಮಾಡಿದ ನಿಗದಿತ ನಮೂನೆಯಲ್ಲಿ ನಾಮಪತ್ರಗಳನ್ನು ಗೊತ್ತುಪಡಿಸಿದ ತಾರೀಖಿನೊಳಗೇ ನಿರ್ವಾಚನಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
5. ನಿರ್ವಾಚನಾಧಿಕಾರಿಯು ನಾಮಪತ್ರಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿ ತಯಾರಿಸಿ ನಾಮಪತ್ರ ಸ್ವೀಕರಿಸುವ ಕೊನೆಯ ದಿನಾಂಕದ ನಂತರದ ಏಳು ದಿನಗಳೊಳಗಾಗಿ ಕಾರ್ಯದರ್ಶಿಗೆ ರವಾನಿಸತಕ್ಕದ್ದು.
6. ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಖಜಾಂಚಿ ಮತ್ತು ಕಾರ್ಯಕಾರಿ ಸಮಿತಿಯ 12 ಹುದ್ದೆಗಳಿಗೆ, ಚುನಾವಣೆಗೆ ಸ್ಪರ್ಧಿಸಲಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯೊಂದಿಗೆ ಸಾಮಾನ್ಯ ಮಂಡಳಿಯ ಸಭೆಯ ಅಧಿಸೂಚನೆ ಹೊರಡಿಸುವುದು ಕಾರ್ಯದರ್ಶಿಯ ಕರ್ತವ್ಯವಾಗಿರುತ್ತದೆ.
7. ಸಾಮಾನ್ಯ ಮಂಡಳಿಯ ಸಭೆಯವರೆಗೂ(ಸಾಮಾನ್ಯ ಮಂಡಳಿಯ ಮೊಗಸಾಲೆಯಲ್ಲೂ) ನಾಮಪತ್ರಗಳ ಹಿಂಪಡೆಯುವಿಕೆಗೆ ಅವಕಾಶವಿರತಕ್ಕದ್ದು.
8. ಅಗತ್ಯವೆನಿಸಿದರೆ ಅದೇ ಸಾಮಾನ್ಯ ಸಭೆಯಲ್ಲಿ ಗುಪ್ತಮತದಾನದ ಮೂಲಕ ಚುನಾವಣೆ ನಡೆಯಬೇಕು.
9. ಒಂದುವೇಳೆ ಯಾವುದೇ ಹುದ್ದೆಗೆ ನಾಮಪತ್ರಗಳು ಇಲ್ಲದಿದ್ದ ಪಕ್ಷದಲ್ಲಿ ಸಾಮಾನ್ಯ ಮಂಡಳಿಯು ತೆರವಾದ ಹುದ್ದೆಗಳಿಗೆ ನಾಮನಿರ್ದೇಶನ ಮಾಡಬಹುದು.
10. ಚುನಾವಣಾಧಿಕಾರಿಯಾಗಿ ಹಿರಿಯ ಸದಸ್ಯರನ್ನೊಬ್ಬರನ್ನು ಅಥವಾ ಹೊರಹೋಗುತ್ತಿರುವ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಿದ ಅಥವಾ ಸದಸ್ಯರಲ್ಲದವರನ್ನು ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸತಕ್ಕದ್ದು, ಮತ್ತು ಕಾನೂನಿನ ಬಗ್ಗೆ ತಿಳುವಳಿಕೆ ಇರುವ ವ್ಯಕ್ತಿಯನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿಕೊಳ್ಳಬಹುದು.
11. ಸಂಘದ ಚುನಾವಣಾಧಿಕಾರಿಗಳು ಸಂಘದ ಚುನಾವಣೆ ನಡೆಸಲು ಸಂಘಕ್ಕೆ ಒಪ್ಪಿಗೆ ಕೊಡತಕ್ಕದ್ದು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಲು ಸ್ಪರ್ಧಿಸುವವರು ತಮ್ಮ ಉಮೇದುವಾರಿಕೆ ಅರ್ಜಿಗಳನ್ನು ಚುನಾವಣಾಧಿಕಾರಿಗಳು ನಿಗದಿಪಡಿಸಿದ ಕಾರ್ಯಸೂಚಿ (ಕ್ಯಾಲೆಂಡರ್ ಆಫ್ ಇವೆಂಟ್ಸ್)ಯಂತೆ ಲಿಖಿತ ಮೂಲಕ ಚುನಾವಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

ಅಧ್ಯಕ್ಷರು

For The Indian Medical Association
(Bangalore Branch)

President

ಕಾರ್ಯದರ್ಶಿ

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

12. ಸರ್ವಸದಸ್ಯರ ಸಾಧಾರಣ ಸಭೆಯ ಕಾರ್ಯಕ್ರಮಗಳಲ್ಲಿ ಸಮಿತಿಯ ಸದಸ್ಯರ ಚುನಾವಣೆ ಬಗ್ಗೆ ಕಾರ್ಯಸೂಚಿ (ಕ್ಯಾಲೆಂಡರ್ ಆಫ್ ಇವೆಂಟ್ಸ್)ಯನ್ನು ಈ ಕೆಳಕಂಡ ವಿವರ ಗಳೊಂದಿಗೆ ಸದಸ್ಯರ ಅವಗಾಹನೆ ಪ್ರಕಟಿಸತಕ್ಕದ್ದು.

ಅ. ಉಮೇದುವಾರಿಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ
ಆ. ಉಮೇದುವಾರಿಕೆ ಅರ್ಜಿಯನ್ನು ಪರಿಶೀಲಿಸುವ ದಿನಾಂಕ
ಇ. ಉಮೇದುವಾರಿಕೆ ಅರ್ಜಿ ವಾಪಸ್ಸು ಪಡೆಯಲು ಅಂತಿಮ ದಿನಾಂಕ
ಈ. ಉಮೇದುವಾರಿಕೆ ಅಂತಿಮ ಪ್ರಕರಣೆ ದಿನಾಂಕ
ಉ. ಚುನಾವಣಾ ದಿನಾಂಕ ಸ್ಥಳ ಮತ್ತು ಕಾಲ
ಊ.ಎಣಿಕೆ ಮತ್ತು ಫಲಿತಾಂಶಗಳ ಪ್ರಕಟಣೆ ದಿನಾಂಕ

ಉಮೇದುವಾರಿಕೆ ಪಟ್ಟಿ ಮತ್ತು ಚುನಾವಣಾ ಪತ್ರ (ಬ್ಯಾಲೆಟ್ ಪೇಪರ್) ತಯಾರಿಸುವ ಸಂದರ್ಭದಲ್ಲಿ ಕನ್ನಡ ಅಕ್ಷರ ಮಾಲೆಯ ಪ್ರಕಾರ ಉಮೇದುವಾರಿಕೆ ಕ್ರಮ ಸಂಖ್ಯೆ ಕೊಡತಕ್ಕದ್ದು.

- ಚುನಾವಣೆಯನ್ನು ರಹಸ್ಯ ಮತದಾನ (ಸಿಕ್ರೇಟ್ ಬ್ಯಾಲೆಟ್) ಪದ್ಧತಿ ಪ್ರಕಾರ ನಡೆಸತಕ್ಕದ್ದು.
- ಚುನಾವಣೆಯಲ್ಲಿ ಭಾಗವಹಿಸಿ ಓಟು ಮಾಡುವ ಅಧಿಕಾರ ಸಂಘದ ಸದಸ್ಯರಿಗೆ ಮಾತ್ರ ಇರತಕ್ಕದ್ದು.
- ಸದಸ್ಯರು ತಾವೇ ಖುದ್ದಾಗಿ ಹಾಜರಾಗಿ ಮತ ನೀಡತಕ್ಕದ್ದು.
- ಮತದಾನದ ಚೀಟಿಗಳು ಸಂಘದ ಮೊಹರುಗಳನ್ನು ಹೊಂದಿರತಕ್ಕದ್ದು.
- ಚುನಾವಣೆಯ ನಡೆಯುವ ಅವರಣದ 150ಅಡಿ ಒಳಗೆ ಮತಗಳಿಗಾಗಿ ಪ್ರಚಾರ ಮಾಡುವುದನ್ನು ನಿಷೇಧಿಸಲಾಗಿದೆ.
- ಚುನಾವಣೆಯ ಎಣಿಕೆ ನಡೆದ ನಂತರ ಚುನಾವಣಾಧಿಕಾರಿಯು ಚುನಾಯಿತರಾದ ಕಾರ್ಯ ಕಾರಿ ಸಮಿತಿ ಸದಸ್ಯರ ಪಟ್ಟಿಯನ್ನು ತಯಾರಿಸಿ ತಮ್ಮ ಸಹಿಯೊಂದಿಗೆ ಸಭೆಯಲ್ಲಿ ಘೋಷಿಸಿ ಪ್ರಕಟಿಸತಕ್ಕದ್ದು.
- ಕ್ರಮವಾಗಿ ಭರ್ತಿಮಾಡಲ್ಪಟ್ಟ ಮತದಾನದ ಚೀಟಿಗಳನ್ನು ಮಾತ್ರ ಗಣನೆಗೆ ತೆಗೆದು ಕೊಳ್ಳ ತಕ್ಕದ್ದು, ಸಂದಿಗ್ಧವಾಗಿ ಗುರುತಿಸಿರುವ ಯಾವ ಮತದಾನದ ಚೀಟಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಕ್ರಮಬದ್ಧವಾದ ಮತದಾನದಿಂದ ಚುನಾಯಿತರಾದವರನ್ನು ಅನುಗುಣವಾಗಿ ಚುನಾಯಿತರಾದರೆಂದು ಘೋಷಿಸಿ ಅದನ್ನು ಸಂಘದ ನೋಟಿಸ್ ಬೋರ್ಡಿನ ಮೇಲೆ ಸರ್ವಸದಸ್ಯರ ಸಭೆಯ ಅಧ್ಯಕ್ಷೆತೆ ವಹಿಸಿದ್ದವರು ಪ್ರಕಟಿಸತಕ್ಕದ್ದು, ಈ ತೆರನಾದ ಮತ ಗಳಿಕೆಯಲ್ಲಿ ಮತಗಳನ್ನು ಇಬ್ಬರು ಅಥವಾ ಹೆಚ್ಚುವರಿ ಮಂದಿಗೆ ಸಮವಾಗಿ ಲಭಿಸಿದ್ದಲ್ಲಿ ಚೀಟಿ ಎತ್ತುವ ಮೂಲಕ ಯಾರು ಚುನಾಯಿತರಾದರೆಂಬುದನ್ನು ಇತ್ಯರ್ಥ ಪಡಿಸತಕ್ಕದ್ದು.
- ಚುನಾವಣೆ ಮುಗಿದ ಮೇಲೆ ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಒಂದು ಪೆಟ್ಟಿಗೆ ಯಲ್ಲಿ ಮೊಹರು ಮಾಡಿಸಿ ಭದ್ರವಾಗಿಡಲು ಏರ್ಪಾಡು ಮಾಡತಕ್ಕದ್ದು. ಈ ಕಾಗದಗಳನ್ನು ಚುನಾವಣೆಯು ಮುಗಿದ ಮೂರು ತಿಂಗಳ ನಂತರ ಯಾವುದೇ ಕೇಸು ತಕರಾರು ವಗೈರಾ ಇಲ್ಲದಿದ್ದ ಪಕ್ಷದಲ್ಲಿ ಸುಡತಕ್ಕದ್ದು.
- ಈ ಸಂಘದ ಚುನಾವಣೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಯಮದ ಪ್ರಕಾರ ನಡೆಸುವ ಚುನಾವಣಾ ರೀತಿ ಇರತಕ್ಕದ್ದು.
- ಚುನಾವಣೆಯ 1 ತಿಂಗಳ ಮೊದಲು ಸುಸ್ತಿ ಸದಸ್ಯರ ಪಟ್ಟಿಯನ್ನು ಸಂಘದ ಕಾರ್ಯದರ್ಶಿಗಳು ಪ್ರಕಟಿಸಬೇಕು ಮತ್ತು ಸದರಿ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಸುಸ್ತಿ ಹಣ ಪಾವತಿಸಬೇಕು. ಅವಧಿ ಮುಗಿದ ಒಂದು ವಾರದ ಒಳಗಾಗಿ ಅರ್ಹ ಮತದಾರ ಪಟ್ಟಿಯನ್ನು ಪ್ರಕಟಿಸಬೇಕು ಮತ್ತು ಈಬಗ್ಗೆ ಸಂಘದ ಎಲ್ಲಾ ಸದಸ್ಯರಿಗೆ ತಿಳುವಳಿಕೆ ನೀಡಬೇಕು.
- ಕಾರ್ಯಕಾರಿ ಸಮಿತಿಯ ಅವಧಿಯ ಮುಗಿಯುವ 2 ತಿಂಗಳ ಮೊದಲೇ ಚುನಾವಣೆ ದಿನಾಂಕ ನಿಗದಿಪಡಿಸಿ ಸಂಘಗಳ ನೊಂಧಣಾಧಿಕಾರಿಗಳಿಗೆ ದಿನಾಂಕ ತಿಳಸಬೇಕು.
- ಚುನಾವಣೆಯ ದಿನಕ್ಕಿಂತ ಮೂರು ತಿಂಗಳು ಮೊದಲು ಯಾವುದೇ ವ್ಯಕ್ತಿಯನ್ನು ಸಂಘಕ್ಕೆ ಸದಸ್ಯರನ್ನಾಗಿ ಮಾಡಿಕೊಳ್ಳತಕ್ಕದ್ದಲ್ಲ. ಆಯ್ಕೆಯಾದ ಕಾರ್ಯಕಾರಿ ಸಮಿತಿಯ ಅವಧಿಯ ಕೊನೆಯ ದಿನದ ಮಧ್ಯಾಹ್ನ ಅಥವಾ ಅವಧಿಯ ಮೊದಲ ದಿನದ ಪೂರ್ವಾಹ್ನದಂದು ಅಧಿಕಾರ ವಹಿಸಿಕೊಳ್ಳಬೇಕು.

ಅಧ್ಯಕ್ಷರು
For The Indian Medical Association
(Bangalore Branch)

President

ಕಾರ್ಯದರ್ಶಿ
Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

ಕಾರ್ಯಕಾರಿ ಸಮಿತಿ ಸದಸ್ಯರು

- 1 ವರ್ಷಕ್ಕೊಮ್ಮೆ ಸರ್ವಸದಸ್ಯರ ಸಭೆಯಲ್ಲಿ ಒಟ್ಟು 12 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾವಣೆ ಮೂಲಕ ಆರಿಸುವುದು.
- ವಾರ್ಷಿಕ ಸಾಧಾರಣ ಸಭೆಯು ಸಂಘದ ಸದಸ್ಯರನ್ನು ಚುನಾಯಿಸುವರು.
- ಕಾರ್ಯಕಾರಿ ಸಮಿತಿ ಸದಸ್ಯರು ಚುನಾಯಿತ ಕಾರ್ಯಕಾರಿ ಸಮಿತಿ ಸದಸ್ಯರು ತಮ್ಮ ತಮ್ಮಲ್ಲಿಯೇ ಈ ಕೆಳಕಂಡಂತೆ ಹುದ್ದೆಗಳಿಗೆ ಆಯ್ಕೆ ಮಾಡಿಕೊಳ್ಳತಕ್ಕದ್ದು.

1.	ಅಧ್ಯಕ್ಷರು	01
2.	ಉಪಾಧ್ಯಕ್ಷರು	02
3.	ಕಾರ್ಯದರ್ಶಿ	01
4.	ಜಂಟಿ ಕಾರ್ಯದರ್ಶಿ	01
5.	ಖಜಾಂಚಿ	01
6.	ಸದಸ್ಯರು	12
	ಒಟ್ಟು	18

ವಿಭಾಗ–6

I. ಲೆಕ್ಕಖಾತೆ, ಖರ್ಚುವೆಚ್ಚ ಮತ್ತು ಹೂಡಿಕೆಗಳ ಕಾರ್ಯಾಚರಣೆ

ಅ. ಸಂಘಕ್ಕಾಗಿ ನಿಧಿ ಹಣವನ್ನು ಕೆಳಕಂಡ ಮೂಲಗಳಿಂದ ಪಡೆಯಲಾಗುತ್ತದೆ.

1. ಆಜೀವ ಮತ್ತು ಪೋಷಕ ಸದಸ್ಯತ್ವದ ಪ್ರವೇಶಾತಿ ಶುಲ್ಕ ಮತ್ತು ವಾರ್ಷಿಕ ವಂತಿಗೆ.
2. ಇತರೇ ಮೂಲಗಳ ವಿಶೇಷ ಕೊಡುಗೆ ಮತ್ತು ಕಾಣಿಕೆ.
3. ಠೇವಣಿಗಳ ಬಡ್ಡಿ ಮೊತ್ತ.
4. ಕಾರ್ಯಕಾರಿ ಸಮಿತಿಯ ಒಪ್ಪಿಗೆಯಿಂದ ಸ್ವೀಕರಿಸಲಾಗುವ ಇತರೇ ಮೂಲಗಳು.

ಆ. ಸಂಘವು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಸಂಘದ ಹೆಸರಿನಲ್ಲಿ ಲೆಕ್ಕಖಾತೆ ತೆಗೆಯತಕ್ಕದ್ದು. ಈ ಖಾತೆಯು ಖಜಾಂಚಿ ಮತ್ತು ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳ ಜಂಟಿ ಖಾತೆಯಾಗಿರತಕ್ಕದ್ದು.

ಇ. ಬ್ಯಾಂಕ್ ಉಳಿತಾಯ/ಚಾಲ್ತಿ ಲೆಕ್ಕಖಾತೆಯಲ್ಲಿ ಗರಿಷ್ಠ ಮೊತ್ತ ರೂ.50,000/–ಇರತಕ್ಕದ್ದು.

ಈ. ಹೆಚ್ಚುವರಿ ಬಾಬತ್ತಿನಲ್ಲಿ ಯಾವುದೇ ಅನಿರೀಕ್ಷಿತ ಸಂದರ್ಭದಲ್ಲಿ ಉಪಯೋಗಿಸಲು ಅನುವಾಗುವಂತೆ ರೂ.1,00,000/–ಮೊತ್ತವನ್ನು ಅಲ್ಪಾವಧಿ ಠೇವಣಿ ಖಾತೆಯಲ್ಲಿ, ಮಿಕ್ಕ ಮೊತ್ತವನ್ನು ದೀರ್ಘಾವಧಿ ಠೇವಣಿ ಖಾತೆಯಲ್ಲಿ ಇಡತಕ್ಕದ್ದು.

ಉ. ಕಾರ್ಯದರ್ಶಿಯ ಮೇಲುಸ್ತುವಾರಿಯಲ್ಲಿ ಖಜಾಂಚಿಯು ಸಂಘದ ಲೆಕ್ಕಖಾತೆಗಳನ್ನು ನಿರ್ವಹಿಸತಕ್ಕದ್ದು. ಖಜಾಂಚಿ–ಕಾರ್ಯದರ್ಶಿ ಇಬ್ಬರೂ ಲೆಕ್ಕಖಾತೆ ನಿರ್ವಹಿಸುವಲ್ಲಿ ಸಂಯುಕ್ತ ಜವಾಬ್ದಾರರಾಗಿರತಕ್ಕದ್ದು.

ಊ. ಸಂಘದ ವಾರ್ಷಿಕ ಸಾಮಾನ್ಯ ಮಂಡಳಿಯ ಸಭೆಯಲ್ಲಿ ಸಂಘದ ಲೆಕ್ಕಪತ್ರ ವರದಿ ಮತ್ತು ವಾರ್ಷಿಕ ಹಣಕಾಸು ವರದಿ ತಯಾರಿಸಲು ಲೆಕ್ಕ ಪರಿಶೋಧಕರನ್ನು ನೇಮಕ ಮಾಡತಕ್ಕದ್ದು.

ಋ. ಇಂತಹ ಎಲ್ಲಾ ಹಣಕಾಸು ವರದಿಗಳನ್ನು ಅನುಮೋದನೆಗಾಗಿ ಸಾಮಾನ್ಯ ಮಂಡಳಿಯ ವಾರ್ಷಿಕ ಸಭೆಯ ಮುಂದೆ ಮಂಡಿಸತಕ್ಕದ್ದು.

ಎ. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯ ಅಧಿನಿಯಮ 13ರಲ್ಲಿ ತಿಳಿಸಿರುವಂತೆ ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿ ಹಾಗೂ ವಾರ್ಷಿಕ ಸಾಮಾನ್ಯ ಮಂಡಳಿಯ ನಡುವಳಿಗಳ(ಮಿನಿಟ್ಸ್)ಗಳ ಜೊತೆಯಲ್ಲಿ ಸಂಘದ ಆಡಿಟ್ ಆದ ಲೆಕ್ಕಪತ್ರಗಳನ್ನು 14 ದಿನಗಳೊಳಗಾಗಿ ಸಂಘಗಳ ನೋಂದಣಿ ರಿಜಿಸ್ಟ್ರಾರ್‌ರವರಿಗೆ ಸಲ್ಲಿಸಿ ಅನುಮೋದಿಸಿಕೊಳ್ಳತಕ್ಕದ್ದು.

ಕಾರ್ಯದರ್ಶಿ

ಅಧ್ಯಕ್ಷರು
For The Indian Medical Association
(Bangalore Branch)

President

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

II. ಲೆಕ್ಕಪರಿಶೋಧನಾ, ಕಾರ್ಯಕಾರಿ ವರ್ಷ

ಚಾಲ್ತಿ ವರ್ಷದ ಎಪ್ರಿಲ್ –1ರಿಂದ ಮುಂದಿನ ವರ್ಷದ ಮಾರ್ಚ್–31 ಸಂಘದ ಲೆಕ್ಕ ಪರಿಶೋಧನಾ ವರ್ಷವಾಗಿರುತ್ತದೆ. ಸಂಘದ ಚಟುವಟಿಗಳಿಗೆ ೧- ಅಕ್ಟೋಬರ್ ರಿಂದ ಮುಂದಿನ ವರ್ಷದ ಸೆಪ್ಟೆಂಬರ್ -೩೦ ಕಾರ್ಯಕಾರಿ ವರ್ಷವಾಗಿರುತ್ತದೆ.

III. ಖರ್ಚುವೆಚ್ಚ :

ಸಂಘದ ಹಣವನ್ನು ಕೆಳಕಂಡ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು.

ಅ. ಕಟ್ಟಡದ ಬಾಡಿಗೆ, ಸಭಾವೆಚ್ಚ ಮತ್ತು ಅಂಚೆವೆಚ್ಚ ಸೇರಿದಂತೆ ಕಚೇರಿಯ ನಿರ್ವಹಣೆಗಾಗಿ.

ಆ. ಇತರ ಸೋದರ ಸಂಸ್ಥೆಗಳಿಗೆ ಸದಸ್ಯತ್ವ ಶುಲ್ಕ ಮತ್ತು ನಿಯಂತ್ರಕ ಸಂಸ್ಥೆಗಳಿಗೆ ಶುಲ್ಕ ಸಂದಾಯ.

ಇ. ಠೇವಣಿಯಿಂದ ಬರುವ ಬಡ್ಡಿ ಮತ್ತು ಇನ್ನಿತರೇ ಕಾಣಿಕೆಗಳನ್ನು ಶೈಕ್ಷಣಿಕ ಕಾರ್ಯಕ್ರಮ, ತರಬೇತಿ, ಉಪನ್ಯಾಸಗಳು, ಸಾಮಾಜಿಕ ಚಟುವಟಿಕೆಗಳು, ಆರೋಗ್ಯ ಶಿಬಿರಗಳು ಸೇರಿದಂತೆ ಮುಂತಾಗಿ ಸಂಘದ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು.

ಈ. ಕಾರ್ಯಕಾರಿ ಸಮಿತಿಯು ಕಾಲಕಾಲಕ್ಕೆ ನಿರ್ಣಯಿಸುವಂತೆ ಸಭೆಗಳಿಗೆ ಹಾಜರಾಗುವ, ಸಂಘವನ್ನು ಪ್ರತಿನಿಧಿಸುವ ಕಚೇರಿ ಪದಾಧಿಕಾರಿಗಳ ಪ್ರಯಾಣ ಭತ್ಯೆ ಮತ್ತು ತುಟ್ಟಿಭತ್ಯೆ ಪಾವತಿಸಬಹುದು.

ಉ. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಜೂರಾದ ಹಣವನ್ನು ಹೊರತುಪಡಿಸಿ, ಕಾರ್ಯಕಾರಿ ಸಮಿತಿಯ ಅನುಮತಿಯಿಲ್ಲದೇ ರೂ.10,000/–ಕ್ಕೆ ಮೀರಿದ ಮೊತ್ತವನ್ನು ಮತ್ತು ವಾರ್ಷಿಕ ಸಾಮಾನ್ಯ ಮಂಡಳಿಯ ಅನುಮತಿಯಿಲ್ಲದೇ ರೂ.1,00,000/–ಕ್ಕೆ ಮೀರಿದ ಮೊತ್ತವನ್ನು ಕಚೇರಿ ಪದಾಧಿಕಾರಿಗಳು ಖರ್ಚು ಮಾಡತಕ್ಕದ್ದಲ್ಲ.

IV. ನಿಧಿಗಳ ಬಳಕೆ:

ಸಂಘದ ಬಂಡವಾಳ(ನಿಧಿ) ಮತ್ತು ಆದಾಯವನ್ನು ಕೇವಲ ಸಂಘದ ಉದ್ದೇಶಗಳಿಗಾಗಿ ಮಾತ್ರ ಬಳಸಿ ಕೊಳ್ಳತಕ್ಕದ್ದು. ಇದರ ಯಾವುದೇ ಭಾಗವನ್ನು ಅಂದರೆ ಲಾಭ, ಬಡ್ಡಿ, ಇನಾಮು, ಲಾಭಾಂಶವನ್ನು ಅನ್ಯೋದ್ದೇಶಕ್ಕೆ ಅಥವಾ ಸದಸ್ಯರಿಗೆ ಹಂಚಲು ಬಳಸಿಕೊಳ್ಳತಕ್ಕದ್ದಲ್ಲ.

V. ಹೂಡಿಕೆಗಳು:

ಕಾಲಕಾಲಕ್ಕೆ ಪರಿಷ್ಕರಣಗೊಳ್ಳುವ ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 13(1) ಮತ್ತು 11(5) ಅಧಿನಿಯಮಗಳಡಿಯಲ್ಲಿ ನಿಗಧಿಪಡಿಸಿದ ಮಾದರಿಯಲ್ಲಿ ಸಂಘದ ನಿಧಿಯನ್ನು ಹೂಡಿಕೆ ಮಾಡತಕ್ಕದ್ದು.

ವಿಭಾಗ –7

ಸಂಘದ ಸಭೆಗಳು:

I. ಸಾಮಾನ್ಯ ಮಂಡಳಿಯ ವಾರ್ಷಿಕ ಸಭೆ:

ಅ. ಸಾಮಾನ್ಯ ಮಂಡಳಿಯ ವಾರ್ಷಿಕ ಸಭೆಯು ಸಾಧ್ಯವಾದಷ್ಟು ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಕಾರ್ಯಕಾರಿ ಸಮಿತಿಯು ಗೊತ್ತುಪಡಿಸುವ ಸ್ಥಳದಲ್ಲಿ ಮತ್ತು ಸಮಯದಲ್ಲಿ ನೆರವೇರತಕ್ಕದ್ದು.

ಆ. ಸಾಮಾನ್ಯ ಮಂಡಳಿಯ ವಾರ್ಷಿಕ ಸಭೆಯ ಸೂಚನೆಯನ್ನು ಸಂಘದ ಎಲ್ಲ ಸದಸ್ಯರಿಗೂ ಸ್ಪಷ್ಟ ಇಪ್ಪತ್ತೊಂದು ದಿನಗಳ ಮುಂಚಿತವಾಗಿ ಕಳಿಸತಕ್ಕದ್ದು. ವಾರ್ಷಿಕ ಸಾಮಾನ್ಯ ಸಭೆಯಾಗಿದ್ದಲ್ಲಿ ಸಭೆಯ ವಿಷಯಾಂಶ (ಅಜೆಂಡಾ)ಗಳ ಪ್ರತಿ, ವಾರ್ಷಿಕ ವರದಿ ಮತ್ತು ಗತವರ್ಷದ ಲೆಕ್ಕ ಪರಿಶೋಧನಾ ತಃಖ್ತೆ ಇವೆಲ್ಲವನ್ನೂ ಸಾಫ್ಟ್ ಕಾಪಿಯಾಗಿ• ಸಭೆಯ ಸೂಚನಾ ಪತ್ರದೊಂದಿಗೆ ಮಿಂಚಂಚೆ ಮೂಲಕ ರವಾನಿಸಬಹುದು.

ಇ. ಮಂಡಳಿಯ ಸಭೆಯಲ್ಲಿ ಇಡಲು ಸದಸ್ಯರ ಗೊತ್ತುವಳಿ ಸೂಚನೆಗಳೇನಾದರೂ ಇದ್ದರೆ ಅಂತವನ್ನು ಕಾರ್ಯದರ್ಶಿಗೆ ಕಡೇ ಪಕ್ಷ ಸಾಮಾನ್ಯ ಸಭೆಯ ಸೂಚನಾ ಪತ್ರ ರವಾನಿಸುವುದಕ್ಕಿಂತ ಮೂರು ವಾರ ಮುಂಚೆ ನೋಂದಾಯಿತ ಅಂಚೆ ಅಥವಾ ಮಿಂಚಂಚೆ ಮೂಲಕ ತಲುಪಿಸಬೇಕು. 'ಅಂತಹ ಸದಸ್ಯರ ಗೊತ್ತುವಳಿ'ಗಳನ್ನು ವಾರ್ಷಿಕ ಸಾಮಾನ್ಯ ಸಭೆಯ ವಿಷಯಾಂಶ(ಅಜೆಂಡಾ)ಗಳಲ್ಲಿ ಸೇರಿಸತಕ್ಕದ್ದು.

ಈ. ಸಾಮಾನ್ಯ ಮಂಡಳಿಯ ವಾರ್ಷಿಕ ಸಭೆಯಲ್ಲಿ ವ್ಯವಹರಿಸಬೇಕಾದ ವಿಷಯಗಳು

ಅಧ್ಯಕ್ಷರು

For The Indian Medical Association
(Bangalore Branch)

ಕಾರ್ಯದರ್ಶಿ

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

1. ಹಿಂದಿನ ಸಾಮಾನ್ಯ ಮಂಡಳಿಯ ವಾರ್ಷಿಕ ಸಭೆ ಮತ್ತು ಒಂದುವೇಳೆ ಜರುಗಿರಬಹುದಾದ ವಿಶೇಷ ಸಾಮಾನ್ಯ ಸಭೆಯ ನಡಾವಳಿಗಳ (ಮಿನಿಟ್ಸ್) ದೃಢೀಕರಣ.
2. ವಾರ್ಷಿಕ ವರದಿಯ ಅಂಗೀಕಾರ
3. ಲೆಕ್ಕಪತ್ರ ಖಾತೆಯ ಪರಿಶೋಧನಾ ತಃಖ್ತೆಯನ್ನು (ಆಡಿಟೆಡ್ ಅಕೌಂಟ್ಸ್) ಮಾನ್ಯ ಮಾಡುವುದು ಮತ್ತು ಕಾರ್ಯಕಾರಿ ಸಮಿತಿಯಿಂದ ಮಂಡನೆಯಾದ ಅಂದಾಜು ಆಯವ್ಯಯವನ್ನು ಮಾನ್ಯ ಮಾಡುವುದು.
4. ಕಾರ್ಯಕಾರಿ ಸಮಿತಿಯ ಸದಸ್ಯರ ಮತ್ತು ಕಚೇರಿ ಪದಾಧಿಕಾರಿಗಳ ಆಯ್ಕೆ. (ಚುನಾವಣಾ ವರ್ಷದ ಸಾಮಾನ್ಯ ಮಂಡಳಿಯ ವಾರ್ಷಿಕ ಸಭೆಯ ವಿಷಯಾಂಶದಲ್ಲಿ ಮಾತ್ರ ಈ ಅಂಶವು ಒಳಗೊಂಡಿರಬೇಕೇ ಹೊರತು ಪ್ರತೀ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಲ್ಲ.)

II. ಸಾಮಾನ್ಯ ಮಂಡಳಿಯ ಅಸಾಧಾರಣ ಸಭೆ:

ಅ. ಯಾವುದೇ ಸಮಯದಲ್ಲಿ ಕಾರ್ಯಕಾರಿ ಸಮಿತಿಯ ಗೊತ್ತುವಳಿ ಮೇರೆಗೆ ಅಥವಾ ಸಂಘದ ನಾಲ್ಕನೇ ಒಂದರಷ್ಟು ಸದಸ್ಯರಿಂದ ಕಾರ್ಯದರ್ಶಿಗೆ ಪ್ರತಿ ಕಳಿಸುವುದರೊಂದಿಗೆ ಅಧ್ಯಕ್ಷರಿಗೆ ಬಂದ ಲಿಖಿತ ಮನವಿಯ ಮೇರೆಗೆ ಅಥವಾ ಅಧ್ಯಕ್ಷರ ವಿವೇಚನಾಧಿಕಾರದ ಸೂಚನೆಯ ಮೇರೆಗೆ ಸಾಮಾನ್ಯ ಮಂಡಳಿಯ ಅಸಾಧಾರಣ ಸಭೆಯನ್ನು ಕರೆಯಬಹುದು. ಕಾರ್ಯಕಾರಿ ಸಮಿತಿಯಿಂದ ಸೂಚಿಸಲ್ಪಟ್ಟ ಅಥವಾ ಸದಸ್ಯರ ಲಿಖಿತ ಮನವಿಯಲ್ಲಿ ಸೂಚಿಸಿದ ಅಥವಾ ಅಧ್ಯಕ್ಷರಿಂದ ಸೂಚಿಸಲ್ಪಟ್ಟ ಗೊತ್ತುವಳಿಗಳ ಮೇಲೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬಹುದು.

ಆ. ಕಾರ್ಯದರ್ಶಿಯು 21 ದಿನಗಳಿಗೆ ಕಡಿಮೆಯಿಲ್ಲದಷ್ಟು ಮುಂಚಿತವಾಗಿ ಎಲ್ಲ ಸದಸ್ಯರಿಗೆ ವಿಷಯಾಂಶ ಒಳಗೊಂಡ ಸಭೆಯ ಸೂಚನಾಪತ್ರವನ್ನು ರವಾನಿಸಿ ಸುತ್ತೋಲೆಗೊಳಿಸಬೇಕು. ಇಂತಹ ಸಭೆಗಳಲ್ಲಿ ಬೇರೆ ಯಾವುದೇ ವಿಷಯಗಳನ್ನು ವ್ಯವಹರಿಸುವಂತಿಲ್ಲ.

ಇ. ಇಂತಹ ಪ್ರಸಂಗದಲ್ಲಿ ಮನವಿ ಸ್ವೀಕರಿಸಿದ ಆರು ವಾರಗಳೊಳಗಾಗಿ ಅಧ್ಯಕ್ಷರು ಸಭೆ ಕರೆಯದಿದ್ದ ಪಕ್ಷದಲ್ಲಿ ಮನವಿಯಲ್ಲಿ ಸಹಿ ಮಾಡಿದ ಸದಸ್ಯರು ಸೂಚನೆ ಕಳಿಸುವ ಮೂಲಕ ಸಭೆ ಕರೆಯುವ ಅಧಿಕಾರವನ್ನು ಹೊಂದಿರುತ್ತಾರೆ. ತುರ್ತು ಸಂದರ್ಭದಲ್ಲಿ ಅಧ್ಯಕ್ಷರು ತಮ್ಮ ವಿವೇಚನಾಧಿಕಾರದಿಂದ ಕಡಿಮೆ ಅವಧಿಯ ಸೂಚನೆಯಿಂದ ಸಭೆ ಸೇರಿಸಬಹುದು.

IIIಸಾಮಾನ್ಯ ಮಂಡಳಿ ಸಭೆಯಲ್ಲಿ ಹಾಜರಾತಿ, ಮತಾಧಿಕಾರ ಮತ್ತು ಮತದಾನದ ವಿಧಾನ:

ಸಭಾ ಸೂಚನೆಯ ಒಂದು ಕ್ಯಾಲೆಂಡರ್ ತಿಂಗಳ ಮುಂಚೆ ಸಂಘದ ಸದಸ್ಯರ ನೋಂದಣಿ ವಹಿಯಲ್ಲಿ ಹೆಸರು ಹೊಂದಿದ ಎಲ್ಲಾ ಸದಸ್ಯರಿಗೂ ಸಾಮಾನ್ಯ ಮಂಡಳಿ ಸಭೆಯಲ್ಲಿ ಹಾಜರಾಗಲು ಮುಕ್ತ ಅವಕಾಶವಿರುತ್ತದೆ.

IV. ಸಾಮಾನ್ಯ ಮಂಡಳಿ ಸಭೆಯ ಕನಿಷ್ಠ ಹಾಜರಾತಿ (ಕೋರಮ್):

ಅ. ಸಂಘದ ಯಾವುದೇ ಸಾಮಾನ್ಯ ಮಂಡಳಿ ಸಭೆಗೆ ಇಪ್ಪತ್ತು ಸದಸ್ಯರು ಉಪಸ್ಥಿತಿ ಅಗತ್ಯ ಕೋರಂ ಆಗುತ್ತದೆ.

ಆ. ಒಂದು ವೇಳೆ ಯಾವುದೇ ಸಭೆಗೆ ಅಗತ್ಯ ಕೋರಂ ಇಲ್ಲದಿದ್ದ ಪಕ್ಷದಲ್ಲಿ ಸದರಿ ಸಭೆಯನ್ನು ಅದೇ ಸ್ಥಳದಲ್ಲಿ ನಡೆಯುವಂತೆ ಒಂದು ಗಂಟೆ ಮುಂದೂಡಬಹುದು. ಮುಂದೂಡಲ್ಪಟ್ಟ ಸಭೆಗೆ ಕೋರಂ ಅವಶ್ಯಕತೆಯೇನೂ ಇರುವುದಿಲ್ಲ.

ಇ. ಹಾಜರಿರುವ ಮೂರನೇ ಎರಡರಷ್ಟು ಸದಸ್ಯರು ಸಭೆ ಮುಂದೂಡಲು ಕೇಳಿದಿದ್ದ ಪಕ್ಷದಲ್ಲಿ, ಕೋರಂ ಕೊರತೆಯ ಹೊರತಾಗಿ ಬೇರೇ ಯಾವುದೇ ಕಾರಣಗಳಿಗಾಗಿಯೂ ಸಭೆಯನ್ನು ಮುಂದೂಡತಕ್ಕದ್ದಲ್ಲ,

V.ಸಾಮಾನ್ಯ ಮಂಡಳಿಯ ವಿಶೇಷ ಸಭೆ.

ಸಂಘದ ನಿಯಮ ನಿಬಂಧನೆಗಳ ತಿದ್ದುಪಡಿ, ಬದಲಾವಣೆ, ಸೇರಿಸುವಿಕೆ, ಅಳಿಸುವಿಕೆಗಳನ್ನು ವಿಶೇಷವಾಗಿ ಅದೇ ಉದ್ದೇಶಕ್ಕಾಗಿ ಕರೆಯಲಾದ ಸಾಮಾನ್ಯ ಮಂಡಳಿಯ ವಿಶೇಷ ಸಭೆಯಲ್ಲಿ ಮಾತ್ರವೇ ಮಾಡತಕ್ಕದ್ದು. ತಿದ್ದುಪಡಿ ಪ್ರಸ್ತಾವನೆಗಳನ್ನೊಳಗೊಂಡ ಸೂಚನೆಯನ್ನು ಸ್ಪಷ್ಟ 20 ದಿನಗಳ ಮುಂಚಿತವಾಗಿ ಸಂಘದ ಎಲ್ಲ ಸದಸ್ಯರಿಗೂ ನೀಡತಕ್ಕದ್ದು. ಪ್ರಸ್ತಾವಿತ ತಿದ್ದುಪಡಿಗಳನ್ನು ಕಾರ್ಯಕಾರಿ ಸಮಿತಿಯಲ್ಲಿ ಸರ್ವಸಾಮಾನ್ಯವಾಗಿ ಚರ್ಚಿಸಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಸೆಕ್ಷನ್ 9 ಮತ್ತು 10ರ ಪ್ರಕಾರ ಅನುಮೋದನೆ ಮತ್ತು ಸ್ಥಿರೀಕರಣಕ್ಕಾಗಿ ವಿಶೇಷ ಸಾಮಾನ್ಯ ಮಂಡಳಿಯ ಮುಂದೆ ಮಂಡಿಸತಕ್ಕದ್ದು.

ತಿದ್ದುಪಡಿಗಳ ಅಂತಿಮ ಅನುಮೋದನೆಗಾಗಿ ಒಂದು ತಿಂಗಳೊಳಗಾಗಿ ಸಾಮಾನ್ಯ ಮಂಡಳಿಯ ಎರಡನೇ ವಿಶೇಷ ಸಭೆಯನ್ನು ಸೇರಿಸತಕ್ಕದ್ದು.

ಅಧ್ಯಕ್ಷರು

For The Indian Medical Association
(Bangalore Branch)

President

ಕಾರ್ಯದರ್ಶಿ

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

ವಿಭಾಗ–8

ಇತರೆ :

I. ನಿಯಮಗಳ ಅನುಪಸ್ಥಿತಿಯಲ್ಲಿ ಕಾರ್ಯವಿಧಾನಗಳು

ನಿಯಮಗಳ ಅನುಪಸ್ಥಿತಿಯಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯಲ್ಲಿರುವ ಕಾರ್ಯವಿಧಾನಗಳನ್ನು ಅನುಸರಿಸಬೇಕು.

II. ಕಚೇರಿ ಪದಾಧಿಕಾರಿಗಳ ನಷ್ಟ ಪರಿಹಾರ

ಸಂಘದ ಪದಾಧಿಕಾರಿಗಳ ಮತ್ತು ಸದಸ್ಯರ ಎಲ್ಲಾ ಚಟುವಟಿಕೆಗಳು ಸಂಘದ ಹಿತದೃಷ್ಟಿಯನ್ನು ಪರಿಪಾಲಿಸುವಲ್ಲಿ ಸಹಾಯಕವಾಗುವವರೆಗೂ ಅವರಿಂದ ನಷ್ಟ ಪರಿಹಾರವನ್ನು ಸರಿದೂಗಿಸುವುದು ಕಾನೂನಾತ್ಮಕವಾಗಿ ಸಾಧ್ಯವಿರುವುದಿಲ್ಲ.

III. ಸಂಘದ ವಿಸರ್ಜನೆ ಮತ್ತು ವಿಲೀನ :

ಆ. ಸಂಬಂಧಿತ ಉದ್ದೇಶಕ್ಕಾಗಿಯೇ ಸೇರಿದ ಸಾಮಾನ್ಯ ಮಂಡಳಿ ಸಭೆಯಲ್ಲಿ ಮತಾಧಿಕಾರವುಳ್ಳ ಮೂರನೇ ನಾಲ್ಕರಷ್ಟು ಸದಸ್ಯರ ಉಪಸ್ಥಿತಿಯಲ್ಲಿ, ಸಂಘವನ್ನು ಮೂರನೇ ಎರಡರಷ್ಟು ಬಹುಮತವಿದ್ದಲ್ಲಿ ವಿಸರ್ಜನೆಗೊಳಿಸಬಹುದು.
ಅದಕ್ಕೆ ಸಂಬಂಧಿಸಿದ ಗೊತ್ತುವಳಿಯ ಪ್ರತಿಯ ಜೊತೆಯಲ್ಲಿ ಅಂತಹ ಸಭೆ ಸೇರಿಸಲು ಸ್ಪಷ್ಟ 30ದಿನಗಳ ಮುಂಚೆಯೇ ಸೂಚನೆಯನ್ನು ರವಾನಿಸಬೇಕು.

ಇ. ಸಂಘದ ವಿಸರ್ಜನೆ ಅಥವಾ ಮುಚ್ಚುವ ಸಂದರ್ಭದಲ್ಲಿ, ಸಂಘದ ವಿಸರ್ಜನಾ ದಿನಾಂಕದಂದು ಇರುವಂತಹ ಆಸ್ತಿ ಸ್ವತ್ತುಗಳನ್ನು, ಸಭೆಯ ನಿರ್ಣಯದಂತೆ, ಋಣ ಮತ್ತು ಹಣಕಾಸು ಭಾದ್ಯತೆಗಳನ್ನು ತೀರಿಸಿದ ನಂತರ ಉಳಿದ ಸ್ವತ್ತನ್ನು ಯಾವುದೇ ಸಂದರ್ಭದಲ್ಲಿ ಸಂಘದ ಸದಸ್ಯರೆಲ್ಲರಿಗೆ ವಿತರಣೆ ಮಾಡಕೂಡದು. ಆದರೆ ಅದನ್ನು ಸಂಘದಂತೆಯೇ ಉದಾತ್ತ ಉದ್ದೇಶಗಳನ್ನು ಹೊಂದಿರುವ ಮತ್ತು ಆದಾಯ ತೆರಿಗೆ ಕಾನೂನು 1961ರ ಅಡಿ 80ಜಿ ಸೌಕರ್ಯ ಹೊಂದಿರುವ ಮತ್ತು ಕಾಲ ಕಾಲಕ್ಕೆ ತಿದ್ದುಪಡಿಯಾಗುವ ನಿಯಮಗಳನ್ವಯ ಮತ್ತೊಂದು ದತ್ತಿ ಸಂಸ್ಥೆಗೆ ವರ್ಗಾಯಿಸಬಹುದು.

ಈ. ಕರ್ನಾಟಕ ಸಂಘಗಳ ನೋಂದಾವಣೆ ಕಾಯ್ದೆ–1960 ನಿಯಮ 21, 22 ಮತ್ತು 23ರ ಮ್ಯುಟಾಟಿಸ್ ರೂಪಾಂತರ ನಿಯಮಗಳು ಅನ್ವಯವಾಗುತ್ತವೆ (ಮ್ಯುಟಾಟಿಸ್ ಮುಟಾಂಡೈ).

IV. ತಡೆಯಲಾಗದಿರುವಿಕೆ(Irrevocability) :

ಇದು ತಡೆಯಲಾಗದಿರುವ ಸಂಘ ಮತ್ತು ಸ್ಥಾಪಕರಿಂದಾಗಲೀ, ಸದಸ್ಯರಿಂದಾಗಲೀ ಸಂಘದ ಆಸ್ತಿಯನ್ನು ತಿರುಹಂಚಿಕೆ ಪಡೆಯಲು ಸಾಧ್ಯವಿಲ್ಲ.

V. ಬೈಲಾಗಳ ತಿದ್ದುಪಡಿ :

ಒಂದುವೇಳೆ ಸಂಘದ ಮೂರನೇ ಎರಡರಷ್ಟು ಸದಸ್ಯರ ಬಹುಮತದಿಂದ ಅನುಮೋದಿಸಲ್ಪಟ್ಟಿದ್ದರೆ ಮಾತ್ರ ಈ ಸಂಘದ ಬೈಲಾಗಳನ್ನು ತಿದ್ದುಪಡಿ ಮಾಡಬಹುದು.

ಸಂಘದ ಜ್ಞಾಪನ/ಬೈಲಾಗಳು/ನಿಯಮ ಮತ್ತು ನಿಬಂಧನೆಗಳ ತಿದ್ದುಪಡಿಗಳು ಅವು ಸಂಘದ ಧ್ಯೇಯೋದ್ದೇಶಗಳಿಗೆ ವ್ಯತಿರಿಕ್ತವಾಗಿದ್ದರೆ ತಿದ್ದುಪಡಿ ಮಾಡತಕ್ಕದ್ದಲ್ಲ.

ಸಂಘದ ಜ್ಞಾಪನ/ಬೈಲಾಗಳು/ನಿಯಮ ಮತ್ತು ನಿಬಂಧನೆಗಳ ತಿದ್ದುಪಡಿಗಳು ಆದಾಯ ತೆರಿಗೆ ಕಾಯ್ದೆ–1961 ನಿಯಮ 2(15), 11, 12, 13 ಮತ್ತು 80ಜಿ ಇವುಗಳಿಗೆ ವ್ಯತಿರಿಕ್ತವಾಗಿದ್ದಲ್ಲಿ ಮತ್ತು ಅಪಚಾರವಾಗುವಂತಹ ಯಾವುದೇ ತಿದ್ದುಪಡಿ ಮಾಡಕೂಡದು.
ಆದಾಯ ತೆರಿಗೆ ನಿರ್ದೇಶಕರು/ಆದಾಯ ತೆರಿಗೆ ಆಯುಕ್ತರುಗಳ ಪೂರ್ವಾನುಮತಿಯಿಲ್ಲದೇ ಯಾವುದೇ ತಿದ್ದುಪಡಿ ಮಾಡತಕ್ಕದ್ದಲ್ಲ. ಆದಾಯ ತೆರಿಗೆ–1960ರ ನಿಬಂಧನೆಗಳಿಗೆ ವಿರುದ್ಧವಾಗಿ ಬೈಲಾಗಳಿಗೆ ಯಾವುದೇ ತಿದ್ದುಪಡಿ ಮಾಡತಕ್ಕದ್ದಲ್ಲ.

ಅಧ್ಯಕ್ಷರು
For The Indian Medical Association
(Bangalore Branch)

President

ಕಾರ್ಯದರ್ಶಿ
Hon. Secretary
IMA Bangalore Branch
IMA House Alur Venkata Rao Road
Chamarajpet Bangalore-560 018

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ವಯಸ್ಸು	ವಿದ್ಯಾರ್ಹತೆ/ವೃತ್ತಿ	ಸಂಘದಲ್ಲಿ ಪದನಾಮ	ಭಾವಚಿತ್ರ	ಸಹಿ
1	ಡಾ. ಅನುರಾಧ ಪರಮೇಶ್ ಪ್ರೆಸಿಡೆಂಟ್, ಐ.ಎಂ.ಎ.ಬೆಂಗಳೂರು ಶಾಖೆ ನಂ.34, ಸಪ್ತನಗರ, 1ನೇ ಎ ಮೈನ್ ಡಾಲರ್ಸ್ ಕಾಲೋನಿ, ಆರ್.ಎಂ.ವಿ.2ನೇ ಹಂತ, ಬೆಂಗಳೂರು–560094.		ಎಂ.ಬಿ.ಬಿ.ಎಸ್ ವೈದ್ಯರು	ಅಧ್ಯಕ್ಷರು		
2	ಡಾ. ವೇಣುಗೋಪಾಲ್ ಕರಿಗೌಡ ವೈಸ್ ಪ್ರೆಸಿಡೆಂಟ್, ಐ.ಎಂ.ಎ.ಬೆಂಗಳೂರು ಶಾಖೆ, ನಂ.41, 5ನೇ ಕ್ರಾಸ್, ಪ್ಯಾರಮೌಂಟ್ ಗಾರ್ಡನ್ ನಿಯರ್ ನಂದಿನಿ ಟಯೋಟ ಕಾರ್ ಷೋರೂಂ, ಕನಕಪುರ ಮುಖ್ಯರಸ್ತೆ, ತಲಘಟ್ಟಪುರ ಬೆಂಗಳೂರು ಸೌತ್, ಬೆಂಗಳೂರು–560062.		ಎಂ.ಬಿ.ಬಿ.ಎಸ್ ಎಂ.ಎಸ್ ವೈದ್ಯರು	ಉಪಾಧ್ಯಕ್ಷರು		
3	ಡಾ.ಮಮತಾ.ಎಂ. ವೈಸ್ ಪ್ರೆಸಿಡೆಂಟ್, ಐ.ಎಂ.ಎ.ಬೆಂಗಳೂರು ಶಾಖೆ, ನಂ.7/ಎ, ಬನಶಂಕರಿ ನಿಲಯ, ಸಲಪೂರಮ್ಮ ಟಿಂಪಲ್ ರಸ್ತೆ, 7ನೇ ಬ್ಲಾಕ್, ಜಯನಗರ, ಯಡಿಯೂರು, ಅರ್ಬನ್ ಬೆಂಗಳೂರು–560085.		ಎಂ.ಬಿ.ಬಿ.ಎಸ್ ವೈದ್ಯರು	ಉಪಾಧ್ಯಕ್ಷರು		
4	ಡಾ. ಪ್ರದೀಪಕುಮಾರ್.ಕೆ.ಎನ್. ಹಾನರರ್ ಸೆಕ್ರೆಟರಿ ಐ.ಎಂ.ಎ.ಬೆಂಗಳೂರು ಶಾಖೆ ಕೇರಾಫ್ ಕೆ.ಬಿ.ನಟರಾಜ್ ನಂ.2, ಕ್ರಿಸ್ಟಲ್ ಹೋಮ್ಸ್, ಕಾಲೇನ ಅಗ್ರಹಾರ, ರಾಮಣಶ್ರೀ ನಗರ, ಬನ್ನೇರುಘಟ್ಟ ಸೌತ್ ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076.		ಎಂ.ಬಿ.ಬಿ.ಎಸ್ ಎಂ.ಎಸ್ ವೈದ್ಯರು	ಜಂಟಿಕಾರ್ಯದರ್ಶಿ		
5	ಡಾ. ಸತ್ಯವತಿ.ಕೆ. ಹಾನರರ್ ಸೆಕ್ರೆಟರಿ ಕೋಂ ನಾಗರಾಜು.ಸಿ. ನಂ.19, 1ನೇ ಕ್ರಾಸ್, ಕುರುಬರಹಳ್ಳಿ ಮುಖ್ಯರಸ್ತೆ, ಮಹಾಲಕ್ಷ್ಮಿಪುರಂ ಲೇಔಟ್, ವಿದ್ಯಾನಗರ, ಬೆಂಗಳೂರು ನಾರ್ತ್ ಬೆಂಗಳೂರು–560086.		ಎಂ.ಬಿ.ಬಿ.ಎಸ್ ವೈದ್ಯರು	ಜಂಟಿಕಾರ್ಯದರ್ಶಿ		
6	ಡಾ. ರಮೇಶ್ ಹೆಚ್.ಸಿ ಹಾನರರ್ ಟ್ರೆಸರರ್ ನಂ.447 20ನೇ ಕ್ರಾಸ್ ಜಯನಗರ,3ನೇ ಬ್ಲಾಕ್,ಬೆಂಗಳೂರು–11		ಎಂ.ಬಿ.ಬಿ.ಎಸ್ ಎಂ.ಎಸ್ ವೈದ್ಯರು	ಸದಸ್ಯರು		

ಅಧ್ಯಕ್ಷರು
The Indian Medical Association
(Bangalore Branch)

President

ಕಾರ್ಯದರ್ಶಿ

Hon Secretary
IMA Bangalore Branch
IMA House, Alur Venkata Rao Road
Chamarajpet Bangalore-560 018

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ವಯಸ್ಸು	ವಿದ್ಯಾರ್ಹತೆ/ವೃತ್ತಿ	ಸಂಘದಲ್ಲಿ ಪದನಾಮ	ಭಾವಚಿತ್ರ	ಸಹಿ
1	ಡಾ. ಸುರೇಶ್ವರಯ್ಯ ಎಸ್.ಎಂ. ಬಿನ್ ಲೇಟ್ ಬಸಪ್ಪಯ್ಯ ನಂ.23, 18ನೇ ಕ್ರಾಸ್, ಅಪೊಸಿಟ್ ವೆಸ್ಟ್ ಪೋಸ್ಟ್ ಆಫೀಸ್, ಮಲ್ಲೇಶ್ವರಂ ಬೆಂಗಳೂರು–560055		ಎಂ.ಬಿ.ಬಿ.ಎಸ್ ಎಂ ಡಿ ವೈದ್ಯರು			
2	ಡಾ.ರಾಮಕೃಷ್ಣ.ಎಸ್. ಬಿನ್ ಲೇಟ್ ಎಸ್.ರಾಜಪ್ಪ ನಂ.6, ಅನುಗ್ರಹ 15ನೇ ಮೈನ್, 6ನೇ ಕ್ರಾಸ್, ಎನ್.ಯು.ಟ್ರಸ್ಟ್,ಆಸ್ಪತ್ರೆ, ರಾಧಾಕೃಷ್ಣ ಲೇಔಟ್, 3ನೇ ಹಂತ, ಪದ್ಮನಾಭನಗರ, ಬೆಂಗಳೂರು–560070.		ಎಂ.ಬಿ.ಬಿ.ಎಸ್ ಎಂ.ಎಸ್ ಜಿ. ಒ ವೈದ್ಯರು			
3	ಡಾ.ಮಧುಶಂಕರ್.ಎಲ್. ನಂ.75, 4ನೇ ಮುಖ್ಯರಸ್ತೆ, ಅಪೊಸಿಟ್ ಹಿಲ್ ವ್ಯೂ ಅಪಾರ್ಟ್‌ಮೆಂಟ್, ಪೂರ್ಣಪ್ರಜ್ಞ ಲೇಔಟ್, ಬೆಂಗಳೂರು–560061		ಎಂ.ಬಿ.ಬಿ.ಎಸ್ ಎಂ.ಎಸ್ ವೈದ್ಯರು			
4	ಡಾ. ಗೌತಮ್ ಬಾಲಾಜಿ.ಜಿ.ಎ. ನಂ.122, ಜಿ.ಕೆ.ನಿಲಯ ವಿನಾಯಕ ಲೇಔಟ್, 2ನೇ ಹಂತ, ವಿಜಯನಗರ ಬೆಂಗಳೂರು–560040.		ಎಂ.ಬಿ.ಬಿ.ಎಸ್ ವೈದ್ಯರು			
5	ಡಾ.ಹೇಮಲತಾ. ಬಿ.ಸಿ. ಕೋಂ ರಾಜು ಸಂಪಂಗಿ ನಂ.2642, 8ನೇ ಮೈನ್, 15ನೇ ಕ್ರಾಸ್, ಬನಶಂಕರಿ 2ನೇ ಹಂತ, ಬಿದರಹಳ್ಳಿ, ಬನಶಂಕರಿ 2ನೇ ಹಂತ, ಬೆಂಗಳೂರು–560070.		ಎಂ.ಬಿ.ಬಿ.ಎಸ್ ಎಂ.ಎಸ್ ವೈದ್ಯರು			
6	ಡಾ. ಮೋಹನ್ ಕುಮಾರ್.ಎಂ. ಬಿನ್ ಕೆ.ಮಹದೇವಯ್ಯ ಸುಪ್ರೀತ್, ನಂ.348, 1ನೇ ಮಹಡಿ, 7ನೇ ಮೈನ್, 4ನೇ ಫೇಸ್, 7ನೇ ಬ್ಲಾಕ್, ಬನಶಂಕರಿ 3ನೇ ಹಂತ ಬೆಂಗಳೂರು–560085		ಎಂ.ಬಿ.ಬಿ.ಎಸ್ ಎಂ ಡಿ ವೈದ್ಯರು			
7	ಡಾ. ರಾಜಶ್ರೀ ನಂ.54 ಶಿರಸಿ ರಸ್ತೆ ಚಾಮರಾಜಪೇಟೆ ಬೆಂಗಳೂರು–560018		ಎಂ.ಬಿ.ಬಿ.ಎಸ್ ವೈದ್ಯರು			

For The Indian Medical Association
(Bangalore Branch)

President

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

8	ಡಾ.ವಿನಯ್ ಹೆಚ್.ಎನ್ ನಂ.606/638, ಯುಗ ನರಸಿಂಹ 12ನೇ ಕ್ರಾಸ್, 2ನೇ ಫೇಸ್, ಗಿರಿನಗರ, ಬೆಂಗಳೂರು–560085.		ಎಂ.ಬಿ.ಬಿ.ಎಸ್ ಎಂ ಡಿ ವೈದ್ಯರು		
9	ಡಾ.ಜ್ಯೋತಿ.ಆರ್. ತಣಡಿಯು ನಂ.ಸಿಹೆಚ್. 34/, 14ನೇ ಕ್ರಾಸ್, 7ನೇ ಮೈನ್, ಕೆನರಾಬ್ಯಾಂಕ್ ರಸ್ತೆ, ಸರಸ್ವತಿಪುರ, ಮೈಸೂರು–570009.		ಎಂ.ಬಿ.ಬಿ.ಎಸ್ ವೈದ್ಯರು		
10	ಡಾ.ಅನಸೂಯ.ಎಸ್. ನಂ.1664, 32ನೇ ಕ್ರಾಸ್, 18ನೇ ಮೈನ್ ಬನಶಂಕರಿ 2ನೇ ಹಂತ ಬೆಂಗಳೂರು–560070		ಎಂ.ಬಿ.ಬಿ.ಎಸ್ ಎಂ ಡಿ, ಡಿ ಎಂ ವೈದ್ಯರು		
11	ಡಾ. ಅನುರಾಧ .ಬಿ ನಂ.1 ವಿಷ್ಣುಪ್ರಿಯ್ ವಸತಿ• ರಾಮಯ್ಯ ಗಾರ್ಡನ್ 6ನೇ ಮೈನ್, ಜೆ ಪಿ ನಗರ ಬೆಂಗಳೂರು–560078		ಎಂ.ಬಿ.ಬಿ.ಎಸ್ ವೈದ್ಯರು		
12	ಡಾ. ಭರತ್ ರಾಜು .ಜಿ ನಂ.89/3ನೇ ಕ್ರಾಸ್, 3ನೇ ಮೈನ್ ವಿನಾಯಕ ಲೇಔಟ್, ವಿಜಯನಗರ ಬೆಂಗಳೂರು–560040.		ಎಂ.ಬಿ.ಬಿ.ಎಸ್ ವೈದ್ಯರು		







1. ಸಂಘದ ಹೆಸರು.

ಈ ಸಂಘದ ಹೆಸರು **ಭಾರತೀಯ ವೈದ್ಯಕೀಯ ಸಂಘ, ಬೆಂಗಳೂರು ಶಾಖೆ [Indian Medical Association, Bangalore Branch]** ಎಂದು ಇರತಕ್ಕದ್ದು. ಇನ್ನು ಮುಂದೆ ಸಂಘ ಎಂದು ಗುರುತಿಸಲಾಗುವುದು.

2. ಸಂಘದ ಕಚೇರಿ.

ಸಂಘದ ನೋಂದಾಯಿತ ಕಚೇರಿಯು **"ಭಾರತೀಯ ವೈದ್ಯಕೀಯ ಸಂಘ, ಬೆಂಗಳೂರು ಶಾಖೆ, IMA** ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018"–ಈ ವಿಳಾಸದಲ್ಲಿರುತ್ತದೆ. ಮತ್ತು ಸಾಮಾನ್ಯ ಮಂಡಳಿಯಸಭೆಯಲ್ಲಿ ಸದಸ್ಯರು ನಿರ್ಣಯಿಸುವ ಪ್ರಕಾರ ಅಂಥಹ ಬೇರೆಯ ಸ್ಥಳ ಅಥವಾ ಸ್ಥಳಗಳಲ್ಲಿ ಬದಲಾಯಿಸಬಹುದಾಗಿದೆ.

3. ಧ್ಯೇಯ ಮತ್ತು ಉದ್ದೇಶಗಳು

(ಅ) ವೈದ್ಯಕೀಯ ವೃತ್ತಿಯ ಘನತೆ, ಗೌರವ ಕಾಪಾಡುವುದು, ಸಂಘದ ಸರ್ವಸದಸ್ಯರಲ್ಲಿ ಪರಸ್ಪರ ಸೌಹಾರ್ದ ಸಹಕಾರವನ್ನು ಬೆಳೆಸುವುದು.


ಅಧ್ಯಕ್ಷರು

For The Indian Medical Association
(Bangalore Branch)

President

ಕಾರ್ಯದರ್ಶಿ

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018

13	ಡಾ. ಶ್ರೀನಿವಾಸ .ಎಸ್ ನಂ.3 1 ನೇ ಮುಖ್ಯ 32ನೇ ಕ್ರಾಸ್ ಎದುರು 2ನೇ ಕ್ರಾಸ್, ಡಾಲರ್ಸ್ ಕಾಲೋನಿ ಆರ್, ಎಂ, ವಿ, 2ನೇ ಹಂತ ಬೆಂಗಳೂರು–560094		ಎಂ.ಬಿ.ಬಿ.ಎಸ್ ವೈದ್ಯರು			
14	ಡಾ. ಧನಪಾಲ .ಎನ್ ನಂ.1664, 32ನೇ ಕ್ರಾಸ್, 18ನೇ ಕ್ರಾಸ್ ಬನಶಂಕರಿ 2ನೇ ಹಂತ ಬೆಂಗಳೂರು–560070		ಎಂ.ಬಿ.ಬಿ.ಎಸ್ ವೈದ್ಯರು			
15	ಡಾ. ಎ. ಎಸ್. ವೆಂಕಟಾಚಪತಿ 141/32ನೇ ಕ್ರಾಸ್, 14ನೇ ಮುಖ್ಯ, 4ನೇ ಕ್ರಾಸ್,ಇ ಬ್ಲಾಕ್, ಜಯನಗರ• ಬೆಂಗಳೂರು–560011		ಎಂ.ಬಿ.ಬಿ.ಎಸ್ ವೈದ್ಯರು			
16	ಡಾ. ತೀರ್ಥಂಕರ ಮುಖರ್ಜಿ ಫ್ಲಾಟ್,104 ಶರವಂತಿ ಆರ್ಕಿಡ್‌ಗಳು ಅಪಾರ್ಟ್‌ಮೆಂಟ್ ನಂ.1 1ನೇ ಮುಖ್ಯ, ರಸ್ತೆ, ಪದ್ಮನಾಭನಗರ ಬೆಂಗಳೂರು←560070		ಎಂ.ಬಿ.ಬಿ.ಎಸ್ ವೈದ್ಯರು			

ಅಧ್ಯಕ್ಷರು

ಕಾರ್ಯದರ್ಶಿ

Hon Secretary
IMA Bangalore Branch
IMA House Alur Venkata Rao Road
Chamarajpet Bangalore-560 018